SHANKARA SHANTHI SANDESHA RNI Reg. No. : KARKAN/2010/35307
**Sri Sri Swamy Prbhodanandaji,** Sri Shankara Shanthi Sandesha, Shankarananda Ashrama, 10th Cross, Ullala Main Road, Sri Hari Layout, Gnanabharati Post, Bengaluru 560 056. Cell: 94491 58587.

## ಆಶ್ರಮದ ವಾರ್ತೆಗಳು

1. ಆಶ್ರಮದಲ್ಲಿ ನಿತ್ಯ ಉದಯ ಹಾಗೂ ಸಂಜೆ ಪೂಜಾದಿಗಳು, ಗೀತಾ ಪಾರಾಯಣಾದಿಗಳು ನಡೆಯುತ್ತದೆ.
2. 11.3.2021ರಂದು ಶ್ರೀ ಶಂಕರಾನಂದಾಶ್ರಮದಲ್ಲಿ ಮಹಾಶಿವರಾತ್ರಿ ವಿಶೇಷ ಪೂಜೆಯನ್ನು ರಾತ್ರಿ 8 ಗಂಟೆಯಿಂದ ಉದಯ 5 ಗಂಟೆಯವರೆಗೆ ಏರ್ಪಡಿಸಲಾಗಿದೆ. ಭಕ್ತಾದಿಗಳು ವಿಶೇಷ ಪೂಜೆಯಲ್ಲಿ ಭಾಗವಹಿಸಿ ಶಿವನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.
3. 6.4.2021 ರಿಂದ 8.4.2021ರವರೆಗೆ ಸದ್ಗುರು ಶ್ರೀ ಶ್ರೀ ಶ್ರೀ ಶಂಕರಾನಂದ ಸ್ವಾಮೀಜಿಗಳವರ 52ನೇ ವರ್ಷದ ಗುರು ಪುಣ್ಯಾರಾಧನೆಯನ್ನು ಏರ್ಪಡಿಸಲಾಗಿದೆ. ಭಕ್ತ ಮಹಾಶಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಗುರುಗಳ ಕೃಪೆಗೆ ಪಾತ್ರರಾಗಿರೆಂದು ಪ್ರಾರ್ಥನೆ.
4. 13.4.2021ರಂದು ಮಂಗಳವಾರ ಹಿಂದೂಗಳ ಹೊಸ ವರ್ಷಾಚರಣೆ, ಚಾಂದ್ರಮಾನ ಯುಗಾದಿ ಪ್ಲವನಾಮ ಸಂವತ್ಸರ ಚೈತ್ರಮಾಸ ಪ್ರಾರಂಭ
5. 21.4.2021ರ ಚೈತ್ರ ಶುದ್ಧ ನವಮಿಯಂದು ಶ್ರೀರಾಮನವಮಿ ಪ್ರಯುಕ್ತ ಆಶ್ರಮದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಲಾಗುವುದು.
6. 28.3.2021 ಹಾಗೂ 27.4.2021ರಂದು ಆಶ್ರಮದಲ್ಲಿ ಹುಣ್ಣಿಮೆ ಪ್ರಯುಕ್ತ ಗೀತಾ ಪುರಶ್ಚರಣೆಯನ್ನು ಏರ್ಪಡಿಸಲಾಗಿದೆ.

**ಸರ್ವರಿಗೂ ಆದರದ ಸ್ವಾಗತ.**

ಓಂ ಶಾಂತಿಃ ಶಾಂತಿಃ ಶಾಂತಿಃ

Printed, Published and Owned by **Sri Swamy Prbhodananda.**, Published by **Sri Swamy Prbhodananda.**, owned by **Sri Swamy Prbhodananda.**, printed at Sri Yanthrodharaka, Printers and Publishers, 10/2, 1st Main, Aswathkatte Road. Rudrappa Garden, Bangalore - 560 026. Mob: 9886075533.
Editor **Sri Swamy Prbhodananda.**

ಓಂ
ನಮೋ ಭಗವತೇ ಶಂಕರಾನಂದಾಯ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ

# ಶಂಕರ ಶಾಂತಿ ಸಂದೇಶ

ದ್ವೈಮಾಸಿಕ ಆಧ್ಯಾತ್ಮಿಕ ಪತ್ರಿಕೆ

ಸಂಪುಟ 14 ಸಂಚಿಕೆ 5 ಮಾರ್ಚ್–ಏಪ್ರಿಲ್ 2021

## ಶಿವರಾತ್ರಿ ಹಾಗೂ ಶ್ರೀಗುರು ಪುಣ್ಯಾರಾಧನೆ ವಿಶೇಷ ಸಂಚಿಕೆ



ಶ್ರೀ ಶಂಕರಾನಂದ ಆಶ್ರಮ ಟ್ರಸ್ಟ್ (ರಿ).
ಶ್ರೀಹರಿ ಬಡಾವಣೆ, ಜ್ಞಾನಜ್ಯೋತಿನಗರ
ಜ್ಞಾನಭಾರತಿ ಅಂಚೆ, ಬೆಂಗಳೂರು – 560 056

ಓಂ ನಮೋ ಭಗವತೇ ಶಂಕರಾನಂದಾಯ

# ನಿ ವೇ ದ ನೆ

-ಶ್ರೀಮತಿ ಗೀತಾಶಂಕರ್, ಬೆಂಗಳೂರು

**ಬಾಹ್ಯೇ ನಿರುದ್ಧೆ ಮನಸಃ ಪ್ರಸನ್ನತಾ ಮನಃ ಪ್ರಸಾದೇ ಪರಮಾತ್ಮ ದರ್ಶನಮ್ ।**
**ತಸ್ಮಿನ್ ಸುದೃಷ್ಟೇ ಭವಬಂಧನಾಶೋ ಬಹಿರ್ನಿರೋಧಃ ಪದವೀವಿಮುಕ್ತೇಃ ॥**

ಯಾರು ಪ್ರಾಪಂಚಿಕ ವಿಷಯಗಳನ್ನು ಚಿಂತೆ ಮಾಡುತ್ತಾರೋ ಅವರ ಮನಸ್ಸು ಸದಾ ದುಃಖ ಸಾಗರದಲ್ಲಿ ಮುಳುಗುತ್ತದೆ. ಯಾರು ವಿಷಯ ಚಿಂತನೆಯನ್ನು ಬಿಟ್ಟು ಆತ್ಮ ಚಿಂತನೆಯನ್ನು ಮಾಡುತ್ತಾ ಇರುತ್ತಾರೋ ಅವರ ಮನಸ್ಸು ಪ್ರಸನ್ನವಾಗುತ್ತದೆ. ಮನಸ್ಸಿನ ಪ್ರಶಾಂತತೆಯಿಂದ ಅವರ ಸಮಸ್ತ ದುಃಖಗಳು ನಾಶವಾಗುತ್ತವೆ. ಮನಸ್ಸಿನ ಸರ್ವದುಃಖಗಳ ನಾಶದಿಂದ ಪರಮಾತ್ಮ ಸಾಕ್ಷಾತ್ಕಾರವಾಗುತ್ತದೆ. ಪರಮಾತ್ಮ ಸಾಕ್ಷಾತ್ಕಾರದಿಂದ ಸಂಸಾರ ಬಂಧನವು ನಾಶವಾಗುತ್ತದೆ. ಆದುದರಿಂದ ವಿಷಯ ಚಿಂತೆಯ ನಿರೋಧವೇ ಮುಕ್ತಿಗೆ ಮಾರ್ಗವೆಂದು ವಿವೇಕ ಚೂಡಾಮಣಿ ಹೇಳುತ್ತದೆ.

ಇದನ್ನೇ ಗೀತಾ 2-65ರಲ್ಲಿ **ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ । ಪ್ರಸನ್ನ ಚೇತಸೋಹ್ಯಾಶುಃ ಬುದ್ಧಿಃ ಪರ್ಯವತಿಷ್ಠತೇ ॥** ಎಂದು ಹೇಳುತ್ತದೆ.

ಆತ್ಮೀಯರೇ! ಮನುಷ್ಯನಾಗಿ ಹುಟ್ಟಿದ ಮೇಲೆ ಅವನು ಅನೇಕ ಜನ್ಮಗಳಲ್ಲಿ ಪುಣ್ಯ ಮಾಡಿಯೇ ಈ ಮನುಷ್ಯ ಜನ್ಮಕ್ಕೆ ಬಂದಿದ್ದಾನೆ. ಮನುಷ್ಯ ಜನ್ಮವು ಅನೇಕ ಜನ್ಮಗಳ ಪುಣ್ಯ ವಿಶೇಷ. ಅದನ್ನು ಮನುಷ್ಯ ಅರಿತುಕೊಂಡು ಇಲ್ಲಿಂದ ಕೆಳಗಿನ ಜನ್ಮಗಳಿಗೆ ಹೋಗದೆ ಪರಮಾತ್ಮನನ್ನೇ ಸೇರಬೇಕು. ಇದಕ್ಕಾಗಿ ಭಗವದ್ಗೀತೆಯ 8-22 ಹೀಗೆ ಹೇಳುತ್ತದೆ.

**ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।**
**ಯಸ್ಯಾಂತ ಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥**

ಹೇ ಪಾರ್ಥ! ಯಾವ ಪರಮಾತ್ಮನಲ್ಲಿ ಸರ್ವ ಜೀವಿಗಳೆಲ್ಲಾ ಅಂತರ್ಗತವಾಗಿವೆಯೋ, ಯಾವ ಆತ್ಮನಿಂದ ಈ ಸರ್ವ ಜಗತ್ತು ಪರಿಪೂರ್ಣವಾಗಿ ವ್ಯಾಪಿಸಿದೆಯೋ ಆ ಸನಾತನ ಪುರುಷನು ಅನನ್ಯವಾದ

**"ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ"**
ಜ್ಞಾನವೆಂಬ ಅಗ್ನಿಯು ಸರ್ವಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ (ಗೀ-4-22)



ಭಕ್ತಿಯಿಂದಲೇ ದೊರೆಯುತ್ತಾನೆ. ಇಂತಹ ಸನಾತನ ಪುರುಷನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಮನುಷ್ಯ ಜನ್ಮದ ಮುಖ್ಯ ಉದ್ದೇಶ. ಅದಕ್ಕಾಗಿ ಈ ಮೇಲಿನ ಶ್ಲೋಕವು ಮಾನವನಾಗಿ ಹುಟ್ಟಿರುವ ನಮ್ಮನ್ನೆಲ್ಲಾ ಎಚ್ಚರಿಸುತ್ತದೆ. ಇಂದೋ ನಾಳೆಯೋ ಈ ಪವಿತ್ರ ಮಾನವ ದೇಹ ಬಿದ್ದು ಹೋಗುತ್ತದೆ. ಅದನ್ನು ಸದಾ ನೆನಪು ಮಾಡಿಕೊ. ಈ ದೇಹ ಬಿದ್ದು ಹೋಗುವುದರ ಒಳಗಾಗಿ ನಾವು ಏಕೆ ಈ ಪವಿತ್ರ ಮಾನವ ಜನ್ಮದಲ್ಲಿ ಅವತರಿಸಿದ್ದೇವೆಂಬುದನ್ನು ಸದಾ ಚಿಂತಿಸು. ಈ ಮಾನವ ಜನ್ಮ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯ ಫಲದಿಂದ ಲಭಿಸಿದ್ದು. ಹೀಗೆ ಅನೇಕ ಜನ್ಮಗಳಲ್ಲಿ ಗಳಿಸಿದ ಪುಣ್ಯದಿಂದ ಪ್ರಾಪ್ತವಾದ ಈ ದೇಹವನ್ನು ಪಶುಗಳಂತೆ ಉಂಡು - ಉಟ್ಟು-ತಿಂದು ಸಾವನ್ನು ಪಡೆಯಬೇಡಿ. ಆಗ ಪಶು ಜನ್ಮಕ್ಕೂ ನಿಮ್ಮ ಜನ್ಮಕ್ಕೂ ವ್ಯತ್ಯಾಸ ಕಾಣುವುದೇ ಇಲ್ಲ. ಇದನ್ನೇ ಈ ಭಗವದ್ಗೀತಾ ಶ್ಲೋಕ ಎಚ್ಚರಿಸುತ್ತದೆ. ಭಗವದ್ಗೀತೆಯ ಪ್ರತಿ ಶ್ಲೋಕವು ನಮ್ಮನ್ನು ಅಜ್ಞಾನ ನಿದ್ದೆಯಿಂದ ಎಚ್ಚರಿಸುವುದಕ್ಕಾಗಿಯೇ ಬಂದಿದೆ. ಅದಕ್ಕೂ ಎಚ್ಚರವಾಗದೆ ಹೋದರೆ ನಮ್ಮಂತಹ ಅಜ್ಞಾನ ನಿದ್ದೆಯವರು ಪಶುಗಳು ಎಂದು ತಿಳಿಯಬೇಕು.

ಈ ಶ್ಲೋಕವೇ ಒಂದು ಮಹಾವಾಕ್ಯ "**ಯೇನ ಸರ್ವಮಿದಂ ತತಮ್**" ಈ ವಾಕ್ಯವು ಸಾಮಾನ್ಯ ವಾಕ್ಯವಲ್ಲ. ಇದು ಅಜ್ಞಾನ ನಿದ್ದೆಯಲ್ಲಿರುವ ನಮ್ಮನ್ನು ಪುನಃ ಪುನಃ ಎಚ್ಚರಿಸಲು ಭಗವಂತನು ಗೀತೆಯಲ್ಲಿ 2-17ರಲ್ಲಿ, 8-22ರಲ್ಲಿ ಮತ್ತು 18-46ರಲ್ಲಿ ಇದನ್ನು ಉದ್ಘೋಷಿಸಿದ್ದಾನೆ. ಆದ್ದರಿಂದ ಇದು ಒಂದು ಮಹಾವಾಕ್ಯ. ಇದು ಬಹಳ ಬೆಲೆಯುಳ್ಳದ್ದು. ಮಹಾಮಹಿಮಾನ್ವಿತವಾದುದು. ಈ ಮಹಾವಾಕ್ಯದಲ್ಲಿ ಭಗವಂತನ ಅಖಂಡ ಸ್ವರೂಪವು ಬೋಧಿಸಲ್ಪಟ್ಟಿದೆ.

**ಇದಂ ಸರ್ವಂ** ಎಂದರೆ ಈ ಸರ್ವವೆಲ್ಲಾ ಯೇನ-ಯಾವನಿಂದ ಪರಿಪೂರ್ಣವಾಗಿದೆಯೋ ಅದೇ "**ತತಮ್**" ಪರಬ್ರಹ್ಮ. ಎಂದರೆ ನಾವು ನೋಡುವುದೆಲ್ಲಾ ಪರಬ್ರಹ್ಮವೆ. ಪರಬ್ರಹ್ಮವು ಇಲ್ಲದ ಸ್ಥಳವೇ ಎಲ್ಲೆಲ್ಲಿಯೂ ಇಲ್ಲ. ಓಲೆಯಲ್ಲಿ ಎಲ್ಲೆಲ್ಲಿಯೂ ಬಂಗಾರವೇ ವ್ಯಾಪಿಸಿರುವಂತೆ, ಸಲಿಕೆಯಲ್ಲಿ ಎಲ್ಲೆಲ್ಲಿಯೂ ಕಬ್ಬಿಣವೇ ವ್ಯಾಪಿಸಿರುವಂತೆ, ಬಟ್ಟೆಯಲ್ಲಿ ಎಲ್ಲೆಲ್ಲಿಯೂ ನೂಲೇ ವ್ಯಾಪಿಸಿರುವಂತೆ ಈ ಆತ್ಮನು ಎಲ್ಲೆಲ್ಲಿಯೂ ವ್ಯಾಪಿಸಿದ್ದಾನೆ.

**ಉದಾ :** ಒಬ್ಬ ಭಕ್ತ, ಗುರುಗಳನ್ನು ನನಗೆ ಉಪದೇಶ ಮಾಡಿರಿ ಎಂದು

**"ಈಶಾವಾಸ್ಯ ಮಿದಂ ಸರ್ವಂ"**
ಸರ್ವ ಜಗತ್ತು ಈಶ್ವರನೇ (ಈಶಾ.ಉ.)

ಕೇಳುತ್ತಿದ್ದ. ಅವರು ಕೆರೆ ದಂಡೆಯಲ್ಲಿ ಒಂದು ಮೀನು ಇದೆ ಅದನ್ನು ಕೇಳು ಎಂದು ಕಳಿಸಿದರು. ಅವನು ಕೆರೆ ದಂಡೆಗೆ ಹೋದ. ಒಂದು ಮೀನು ನೀರಿನಲ್ಲಿತ್ತು. ಅದನ್ನು ಸ್ವಾಮಿ? ನನಗೆ ಬ್ರಹ್ಮವನ್ನು ಉಪದೇಶಿಸಿರಿ ಎಂದು ಕೇಳಿದ. ಆಗ ಆ ಮೀನು ನನಗೆ ಬಹಳ ಬಾಯಾರಿಕೆ ಆಗಿದೆ. ನನಗೆ ಸ್ವಲ್ಪ ನೀರು ತಂದು ಕೊಡು ಆಮೇಲೆ ಬ್ರಹ್ಮವನ್ನು ಉಪದೇಶಿಸುತ್ತೇನೆ ಎಂದಿತು. ಅಯ್ಯೋ! ನಿನ್ನ ಒಳಗೆ-ಹೊರಗೆ-ಮೇಲೆ - ಕೆಳಗೆ ಎಲ್ಲೆಲ್ಲಿಯೂ ನೀರೇ ಇರುವಾಗ ಪುನಃ ನೀರನ್ನು ಕೇಳುತ್ತೀಯಲ್ಲಾ! ಇದು ಆಶ್ಚರ್ಯ ಎಂದ. ನನ್ನದು ಆಶ್ಚರ್ಯವಲ್ಲ. ನಿನ್ನದೇ ಮಹಾದಾಶ್ಚರ್ಯ, ಆಭರಣದಲ್ಲಿ ಬಂಗಾರ ವ್ಯಾಪಿಸಿರುವಂತೆ ಮೇಜಿನಲ್ಲಿ ಮರವು ವ್ಯಾಪಿಸಿರುವಂತೆ, ನಿನ್ನ ಕೆಳಗೆ, ಒಳಗೆ ಮೇಲೆ ಎಲ್ಲೆಲ್ಲಿಯೂ ಭಗವಂತನೇ ವ್ಯಾಪಿಸಿದ್ದಾನೆ. ಇರುವ ಪರಮಾತ್ಮನನ್ನು ಮನೆ-ಮಠ-ಕಲ್ಲು-ಗೋಡೆ ಇತ್ಯಾದಿಯಾಗಿ ನೋಡುವಂತೆ ನೋಡುವುದನ್ನು ಬಿಟ್ಟು ಪರಮಾತ್ಮನನ್ನು ನೋಡು, ಆಗ ಪರಮಾತ್ಮ ಕಾಣುತ್ತಾನೆ. ಇದೇ "**ಯೇನ ಸರ್ವಮಿದಂ ತತಮ್**" ಇದೆಲ್ಲವೂ ಅಂದರೆ ನೇತ್ರಕ್ಕೆ ಗೋಚರವಾಗುವ, ಚರ್ಮಕ್ಕೆ ಸ್ಪರ್ಶರೂಪವಾಗಿ ತೋರುವ, ಕಿವಿಗೆ ಶಬ್ದ ರೂಪವಾಗಿ ಕೇಳುವ, ಮೂಗಿನಲ್ಲಿ ಶ್ವಾಸೋಚ್ಛಾಸರೂಪದಲ್ಲಿ ಬಂದು ಹೋಗುವ ಸರ್ವವೂ ಪರಮಾತ್ಮನೆ. ಸಮುದ್ರದಲ್ಲಿ ಎಲ್ಲೆಲ್ಲಿಯೂ ಗುಳ್ಳೆ ಇತ್ಯಾದಿ ರೂಪದಿಂದ ಕಾಣುವುದೆಲ್ಲಾ ನೀರೆ. ಈ ಸಮಸ್ತವೂ ಪರಮಾತ್ಮನೆ. ಅದಕ್ಕೆ ಶಿವಶರಣರು **"ನೋಡುವ ಕಣ್ಣು ಹುಣ್ಣಾಗಬಾರದು"** ಎಂದರೆ ನಮ್ಮೆಲ್ಲಾ ನೋಟಕ್ಕೆ ಪರಮಾತ್ಮನೆ ಕಾಣುತ್ತಾನೆ. ಆ ನೋಟಕ್ಕೆ ಜಗತ್ತು ಎಂದರೆ ದುಃಖ ರೂಪ ಪ್ರಪಂಚ ಕಂಡರೇ ನೋಡುವ ಕಣ್ಣು ಹುಣ್ಣಾಗಿದೆ ಎಂದು ಅರ್ಥ. ನಮ್ಮ ನೋಟದಲ್ಲಿ ಎಲ್ಲೆಲ್ಲಿಯೂ ಪರಮಾತ್ಮನೇ ಕಾಣಬೇಕು; ಓಲೆಯಲ್ಲಿ (ಆಭರಣ) ಎಲ್ಲೆಲ್ಲಿಯೂ ಬಂಗಾರವಿದ್ದರೂ ನಾವು ಬಂಗಾರ ನೋಡದೆ ಓಲೆಯನ್ನೇ ನೋಡುವಂತೆ ಈ ಜಗತ್ತೆಲ್ಲಾ ಪರಮಾತ್ಮಮಯವಾಗಿದ್ದರೂ ಮರ-ಗಿಡ-ಮನುಷ್ಯ-ಮೃಗ ಇತ್ಯಾದಿ ರೂಪದಿಂದ ನೋಡುತ್ತೇವೆ. ಎಲ್ಲೆಲ್ಲಿಯೂ ಭಗವಂತನೇ ಇರುವಂತಾಗಿದ್ದರೂ ನಾವು ಕಲ್ಲು-ಮರ, ಜನ, ಧನ-ನೆಲ ನೋಡುತ್ತೇವೆ. ಆದ್ದರಿಂದ ನಮ್ಮ ನೋಟವನ್ನು ಸರಿ ಮಾಡಿಕೊಳ್ಳಲು ಭಗವಂತನು "**ಯೇನ ಸರ್ವಮಿದಂ ತತಮ್**" ಇದೆಲ್ಲವೂ ಭಗವಂತನೇ ಎಂದೂ ಗೀತೆಯಲ್ಲಿ ನಮ್ಮನ್ನು ಎಚ್ಚರಿಸಲು ಮೂರು ಸಾರಿ ಹೇಳಿದ್ದಾನೆ. ಇದೇ ಪರಮಾತ್ಮನ ಅಖಂಡ ಸ್ವರೂಪ.

**"ದೃಶ್ಯತೇ ತ್ವಗ್ರಯಾ ಬುದ್ಧ್ಯ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ"**
ಸೂಕ್ಷ್ಮ ಬುದ್ಧಿಯುಳ್ಳವರು ಪರಮಾತ್ಮನನ್ನು ಗ್ರಹಿಸಬಹುದು (ಕಠ.ಉ.)



ಪ್ರಹ್ಲಾದನು ಗರ್ಭದಲ್ಲಿರುವಾಗಲೇ ಎಲ್ಲೆಲ್ಲಿಯೂ ಭಗವಂತನನ್ನು ನೋಡಿ-ದ್ದರಿಂದ; ಪರೀಕ್ಷಿತನು ಗರ್ಭದಲ್ಲಿರುವಾಗಲೇ ಎಲ್ಲೆಲ್ಲಿಯೂ ಭಗವಂತನನ್ನು ನೋಡಿದ್ದರಿಂದಲೇ ತಾಯಿ ಗರ್ಭದಿಂದ ಹೊರಬಂದ ಕೂಡಲೇ ಎಲ್ಲೆಲ್ಲಿಯೂ ಭಗವಂತನನ್ನೇ ನೋಡಿದರು. ನಿಜವಾಗಿ ನೋಡಿದರೆ ಇರುವವನು ಅವನೊಬ್ಬನೇ, ಮಡಕೆಯಲ್ಲಿ ಮಣ್ಣು ವ್ಯಾಪಿಸಿದ್ದರು ನಾವು ಮಡಕೆಯನ್ನೇ ನೋಡುತ್ತೇವೆ. ಆಭರಣದಲ್ಲಿ ಬಂಗಾರ ವ್ಯಾಪಿಸಿದ್ದರೂ ಚೈನು-ಬಳೆಯನ್ನಾಗಿಯೇ ನೋಡುತ್ತೇವೆ.

ಇಂತಹ ಪರಮಾತ್ಮನನ್ನು ಹೇಗೆ ಪಡೆಯಬೇಕು? ಇವನನ್ನು ಅನನ್ಯ ಭಕ್ತಿಯಿಂದ ಪಡೆಯಬೇಕು. ಅನನ್ಯ ಭಕ್ತಿ ಎಂದರೇನು? ಅನ್ಯ ವಸ್ತುಗಳಲ್ಲಿರುವ ಪ್ರೇಮವನ್ನು ತ್ಯಜಿಸಿ ಪರಮಾತ್ಮನಲ್ಲಿ ಪ್ರೀತಿ ಇಡುವುದೇ ಅನನ್ಯ ಭಕ್ತಿ. ಪ್ರಹ್ಲಾದನಿಗೆ ಮರ, ಕಲ್ಲು, ಮಣ್ಣು ಎಲ್ಲೆಲ್ಲಿಯೂ ಭಗವಂತನೇ ಕಂಡ. ಪರಮಾತ್ಮನು ತನಗೆ ಅನ್ಯವಲ್ಲವೆಂದು ತಾನೇ ಪರಮಾತ್ಮ ಎಂಬ ಅಖಂಡ ಭಾವನೆಯನ್ನು ಹೊಂದುವುದೇ ಅನನ್ಯ ಭಕ್ತಿ. ಇದಕ್ಕೆ ಶ್ರದ್ಧೆ ಬಹಳ ಮುಖ್ಯ. ಅತೀಂದ್ರಿಯವಾದ ವಿಷಯಗಳು ತರ್ಕಕ್ಕೆ ಸಿಕ್ಕುವುದಿಲ್ಲ. ಹಾಗಾದರೆ ಯಾರಿಗೆ ಸಿಕ್ಕುತ್ತದೆ?

ಪ್ರಪಂಚದಲ್ಲಿ ಮಾನವ ಸಮಾಜವನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು- 1) ಕರ್ಮಾತೀತರು, 2) ಕರ್ಮ ಯೋಗಿಗಳು, 3) ಸಕಾಮ ಕರ್ಮಿಗಳು, 4) ಕರ್ಮ ಭ್ರಷ್ಟರು.

ಇದರಲ್ಲಿ ಕರ್ಮಾತೀತರು ಜೀವನ್ಮುಕ್ತರು. ಇವರು ಪರಮಾತ್ಮ ಸ್ವರೂಪರೆ. ಇವರು ಹಿಂದೆ ನಾನಾ ಜನ್ಮಗಳಲ್ಲಿ ಮಾಡಿದ ಕರ್ಮದ ರಾಶಿಯು ಜ್ಞಾನಾಗ್ನಿಯಿಂದ ಸುಟ್ಟು ಹೋಗಿದೆ. ಇವರು ಕೃತಕೃತ್ಯರು ಅಂದರೆ ಮಾಡುವುದನ್ನೆಲ್ಲಾ ಮಾಡಿ ಮುಗಿಸಿರುವವರು. ಇವರಿಗೆ ಶಾಸ್ತ್ರದ ವಿಧಿ ನಿಷೇಧಗಳು ಯಾವುದು ಇಲ್ಲ. ಇವರು ಹೇಳುವುದೇ ವೇದ. ಇವರು ಇರುವುದೇ ಕಾಶಿ, ಇವರು ಎಲ್ಲಿಗೂ ಹೋಗಬೇಕಾದುದಿಲ್ಲ. ಇಂತಹವರು ಸಿದ್ಧಾರೂಢರಾಗಿ, ಶಂಕರರಾಗಿ, ಜ್ಞಾನ ದೇವರಾಗಿ, ಗಾಂಧೀಜಿಯವರಾಗಿ ಹೋದರು. ಇವರು ಸುಟ್ಟ ಗಡಿಗೆಯಂತೆ ಜ್ಞಾನಾಗ್ನಿಯಂತೆ ಸುಟ್ಟವರು. ಇವರು ಮುಕ್ತರಾಗಿಯೇ ಇರುತ್ತಾರೆ. ಇವರನ್ನು ಛಾಂದೋಗ್ಯವು **"ನ ತಸ್ಯ ಪ್ರಾಣಾಃ ಹ್ಯುತ್ಕ್ರಾಮಂತೆ ಅತ್ರೈವ ಬ್ರಹ್ಮ ಸಮಲೀಯಂತೆ"** ಇವರ ಪ್ರಾಣಾ ಪಾನಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ದೇಹ ಬಿಟ್ಟು

**"ಯಜ್ಞೋ ವಿಶ್ವಸ್ಯ ಭುವನಸ್ಯ ನಾಭಿಃ"**
ಯಜ್ಞವು ಜಗತ್ತಿನ ಮುಖ್ಯವಾದ ನಾಭಿಸ್ಥಾನ (ಅಥರ್ವಣವೇದ)

ಹೊರಗೆ ಹೋಗುವುದೇ ಇಲ್ಲ. ಹೋದರೆ ಮತ್ತೊಂದು ಶರೀರಕ್ಕೆ ಸೇರಿ ಹುಟ್ಟಲೇ ಬೇಕು. ಆದ್ದರಿಂದ ಅದೇ ದೇಹದಲ್ಲಿ ಬ್ರಹ್ಮಾಕಾರ ಹೊಂದುತ್ತವೆ. ಇದರಿಂದ ಇವರನ್ನು ಬ್ರಹ್ಮಲೀನರು ಎನ್ನುತ್ತಾರೆ.

ಇನ್ನು 2ನೇ ನಿಷ್ಕಾಮ ಕರ್ಮಿಗಳು ತಾವು ಮಾಡುವ ಸರ್ವ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಾರೆ. ಇವರು ಮಾಡುವ ಕರ್ಮಗಳು ಫಲರಹಿತವಾದ ಕರ್ಮಗಳು. ಇವರು ಬ್ರಹ್ಮಲೋಕವನ್ನು ಸೇರಿ ಪ್ರಳಯ ಕಾಲದವರೆಗೂ ಬ್ರಹ್ಮವಿಚಾರ ಮಾಡುತ್ತಾ ಇರುತ್ತಾರೆ. ಪ್ರಳಯ ಕಾಲದಲ್ಲಿ ಚತುರ್ಮುಖ ಬ್ರಹ್ಮನೊಡನೆ ಮುಕ್ತರಾಗುತ್ತಾರೆ. ಇವರಿಗೂ ಪುನರ್ಜನ್ಮವಿಲ್ಲ.

ಇನ್ನು ಮೂರನೆಯವರು ಸಕಾಮಕರ್ಮಿಗಳು. ಇವರು ಫಲದ ಇಚ್ಛೆಯಿಂದ ಕರ್ಮ ಮಾಡುತ್ತಾರೆ. ಇವರು ಪಾಪಕರ್ಮ (ನಿಷಿದ್ಧ ಕರ್ಮ) ಮಾಡುವುದಿಲ್ಲ. ಇವರು ದೇಹವನ್ನು ಬಿಟ್ಟು ಪಿತೃಯಾನ ಮಾರ್ಗದಿಂದ ಪಿತೃಲೋಕ ಸೇರುತ್ತಾರೆ. ಈ ಪಿತೃ ಲೋಕವನ್ನೇ ಚಂದ್ರ ಲೋಕವೆಂದೂ, ಸ್ವರ್ಗವೆಂದು ಕರೆಯುತ್ತಾರೆ. ಅಲ್ಲಿ ಪುಣ್ಯ ಇರುವವರೆಗೆ ಇದ್ದು ಪುಣ್ಯ ತೀರಿದ ಬಳಿಕ ಪುನರ್ಜನ್ಮಕ್ಕೆ ಬರುತ್ತಾರೆ.

ಇನ್ನು ನಾಲ್ಕನೆಯವರು ಕರ್ಮಭ್ರಷ್ಟರು. ಇವರೇ ಪ್ರಪಂಚದಲ್ಲಿ ಅಧಿಕವಾಗಿದ್ದಾರೆ. ಇವರು ಮನುಷ್ಯ ರೂಪದ ಮೃಗಗಳು. ಇವರಿಗೆ ಶಾಸ್ತ್ರವಿಲ್ಲ, ಆಚಾರವಿಲ್ಲ, ಸ್ವೇಚ್ಛಾಚಾರಿಗಳು, ತೃಣಜಲಕ ಹುಳುವಿನಂತೆ ಈ ದೇಹ ಬಿಟ್ಟು ಮತ್ತೊಂದು ಜನ್ಮ ಪಡೆಯುತ್ತಾರೆ. ಇವರು ದೇಹ ಬಿಡುತ್ತಲೇ ಪಶುವೋ, ಪಕ್ಷಿಯೋ, ಮೃಗವೋ, ಸರ್ಪವೋ, ಹುಳವೋ ಆಗಿ ಜನ್ಮಿಸುತ್ತಾರೆ.

ಇಲ್ಲಿ ಈ ನಾಲ್ಕು ಜನರಲ್ಲಿ ಲೋಕಾಂತರವು ಮಧ್ಯದ ಇಬ್ಬರಿಗೆ ಹೇಳಿದೆ. ಒಬ್ಬರು ಉಪಾಸಕರು ಮತ್ತೊಬ್ಬರು ಕರ್ಮಿಗಳು. ಈ ಇಬ್ಬರೂ ಯೋಗಿಗಳೆಂದು ಗೀತೆ ಕರೆದಿದೆ. ಆದ್ದರಿಂದ ಆತ್ಮೀಯರೇ ತಾವು ಕರ್ಮಾತೀತರಾಗಿರಿ, ಶ್ರೇಷ್ಠ ಜನ್ಮ ಪಡೆಯಿರಿ. ಜ್ಞಾನದೇವ, ಏಕನಾಥ ಸ್ವಾಮಿಗಳಂತೆ, ಸನತ್ಕುಮಾರಾದಿಯವರಂತೆ ಇದ್ದು ಮುಕ್ತಿ ಪಡೆಯಿರಿ. ಮುಕ್ತಿಯು ನಿಮ್ಮ ಜನ್ಮ ಸಿದ್ಧ ಹಕ್ಕು.

**ಓಂ ತತ್ಸತ್**

---

**"ನಾ ಹಂ ಕರ್ತಾ ಹರಿಃ ಕರ್ತಾ"**
ಯಾವ ಕೆಲಸಕ್ಕೂ ನಾನು ಕರ್ತನಲ್ಲ, ಭಗವಂತನೇ ಕರ್ತ



**ಬ್ರಹ್ಮಾನುಭವ ಸಿದ್ಧಿಃ**

## ಇನ್ನು ಬ್ರಹ್ಮಭೂತನ ನಾಲ್ಕನೇ ಲಕ್ಷಣವನ್ನು ತಿಳಿಯೋಣ

(ಮುಂದುವರೆದ ಭಾಗ) – ಶ್ರೀಮತಿ ವಿಜಯಲಕ್ಷ್ಮೀ, ಬೆಂಗಳೂರು

(ಹಿಂದಿನ ಸಂಚಿಕೆಯಲ್ಲಿ ಬ್ರಹ್ಮಭೂತನ ನಾಲ್ಕು ಲಕ್ಷಣಗಳಾದ 1) ಪ್ರಸನ್ನಾತ್ಮ, 2) ನಶೋಚತಿ, 3) ನಕಾಂಕ್ಷತಿ ಹಾಗೂ 4) ಸಮ ಚಿತ್ತವುಳ್ಳವನು. ಇದರಲ್ಲಿ ಮೂರು ಲಕ್ಷಣಗಳನ್ನು ತಿಳಿದುಕೊಂಡವು)

**ಸಮಃ ಸರ್ವೇಷು ಭೂತೇಷು** : ಸರ್ವಭೂತಗಳಲ್ಲಿ ಸಮಭಾವ–ವುಳ್ಳವನಾಗಿರುತ್ತೇನೆ. 13ನೇ ಅಧ್ಯಾಯದ 27ನೇ ಶ್ಲೋಕದಲ್ಲಿಯೂ ಹೀಗೆಯೆ ಬಂದಿದೆ. **'ಸಮಃ ಸರ್ವೇಷು ಭೂತೇಷು'** 13ನೇ ಅಧ್ಯಾಯದಲ್ಲಿ ಭಗವಂತನ ಲಕ್ಷಣವನ್ನು ಹೇಳುವಾಗ ಭಗವಂತನು ಸರ್ವಭೂತಗಳಲ್ಲಿಯೂ ಸಮನಾಗಿ–ದ್ದಾನೆಂದು ಹೇಳಲಾಗಿದೆ. ಇಲ್ಲಿ ಬ್ರಹ್ಮಭೂತನ ಲಕ್ಷಣ ಹೇಳುವಾಗಲೂ ಅದೇ ರೀತಿ ಹೇಳಿದ್ದರಿಂದ ಭಗವಂತನಿಗೂ ಭಕ್ತನಿಗೂ, ಪರಬ್ರಹ್ಮಕ್ಕೂ, ಬ್ರಹ್ಮಭೂತನಿಗೂ ಯಾವ ವ್ಯತ್ಯಾಸವೂ ಇಲ್ಲವೆಂದೂ ಬ್ರಹ್ಮಭೂತನು ಭಗವಂತನೇ ಎಂದು ಸ್ಪಷ್ಟವಾಯಿತು. ಇನ್ನು 9ನೇ ಅಧ್ಯಾಯದ 29ನೇ ಶ್ಲೋಕದಲ್ಲಿ **'ಸಮೋಹಂ ಸರ್ವಭೂತೇಷು'** ಎಂದರೆ ನಾನು ಸರ್ವಭೂತಗಳಲ್ಲಿಯೂ ಸಮನಾಗಿರುವೆನು ಅಂದರೆ 'ಒಂದೇ ಆಗಿರುವೆನು' ಎಂದು ಭಗವಂತನು ಹೇಳಿದ್ದಾನೆ. ಇನ್ನು 6–31ರಲ್ಲಿ **ಸರ್ವಭೂತಸ್ಥಿತಂ ಯೋಮಾಮ್** ಎಂದು 5–25ರಲ್ಲಿ ಮತ್ತು 12–4ರಲ್ಲಿ **ಸರ್ವಭೂತಹಿತೇರತಾಃ** ಎಂದೂ 6–29ರಲ್ಲಿ **ಸರ್ವಭೂತಾನಿ ಚಾತ್ಮನಿ** ಎಂದೂ 10–20ರಲ್ಲಿ **ಸರ್ವಭೂತಾಶಯಸ್ಥಿತಃ**, 18–20ರಲ್ಲಿ **ಸರ್ವಭೂತೇಷು ಯೇನೈಕಮ್** ಎಂದೂ 11–55ರಲ್ಲಿ **'ನಿರ್ವೈರಃ ಸರ್ವಭೂತೇಷು'** ಎಂಬುದಾಗಿ ಭಗವಂತನು ಹೇಳಿದ್ದಾನೆ.

ಅಂದರೆ ಗೀತೆಯು ಸಮದೃಷ್ಟಿಯನ್ನೇ ಹೇಳಿದೆ ಎಂದು ಗ್ರಹಿಸಬೇಕು. ಬ್ರಹ್ಮಭೂತ ಮಹಾತ್ಮನು ಎಲ್ಲೆಲ್ಲಿಯೂ ತನ್ನನ್ನು ತನ್ನಲ್ಲಿ ಎಲ್ಲವನ್ನೂ ನೋಡುತ್ತಾನೆಂದು ಅರ್ಥ. **'ನಿರ್ದೋಷಂ ಹಿ ಸಮಂ ಬ್ರಹ್ಮ'** ದೋಷವಿಲ್ಲದ ಬ್ರಹ್ಮವು ಎಲ್ಲೆಲ್ಲಿಯೂ ಸಮವಾಗಿದೆ. ಇರುವುದೆಲ್ಲಾ ತನ್ನ ಸ್ವರೂಪವೇ ಆದ ಬ್ರಹ್ಮ ಆಗಿರುವಾಗ ದ್ವೇಷ, ಅಸೂಯೆ, ದುಃಖ ದುರ್ಮಾನಗಳು ಬರುವುದಾದರೂ ಹೇಗೆ! ಉದಾ.: ಹಲ್ಲು ಅಕಸ್ಮಾತ್ ನಾಲಿಗೆಯನ್ನು ಕಡಿಯಿತು. ಆಗ ಸಿಟ್ಟಿನಿಂದ ಹಲ್ಲನ್ನು ಸುತ್ತಿಗೆಯಿಂದ ಗುದ್ದಿಕೊಳ್ಳುತ್ತಿಯಾ! ಇಲ್ಲ. ಆದ್ದರಿಂದ ಸಮತ್ವ ಬುದ್ಧಿಯೆ ಬ್ರಹ್ಮಬುದ್ಧಿ. ಈ ಬುದ್ಧಿ ಸ್ಥಿರವಾಗುವುದೇ ಮಾನವನ ಚರಮ ಸ್ಥಿತಿ. **"ಯೇಷಾಂ**

---

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**
ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು ಮನಸ್ಸಿಗೆ ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೇ ಪರಮಾತ್ಮ (ಕೇನ.ಉ.)

**ಸಾಮ್ಯೇ ಸ್ಥಿತಂ ಮನಃ''** ಯಾರ ಮನಸ್ಸು ಸಮಸ್ಥಿತಿಯಲ್ಲಿ ಅಂದರೆ ಬ್ರಾಹ್ಮೀ ಸ್ಥಿತಿಯಲ್ಲಿದೆಯೋ ಅವನೇ ಬ್ರಹ್ಮನಿಷ್ಠ. ಬ್ರಹ್ಮಾನಂದ ಭೋಗಿಸುವವನೂ ಅವನೆ.

ಬ್ರಹ್ಮಾನಂದವು ಸರ್ವಶ್ರೇಷ್ಠ. ಸುಖಸ್ವರೂಪವಾದುದು. ಆನಂದವೇ ಮುಕ್ತಿ ಆನಂದವನ್ನು ಪ್ರಾಪ್ತಿ ಮಾಡಿಕೊಳ್ಳಲು ಸಂಸಾರದಲ್ಲಿ ಆನಂದವನ್ನು ಬೆಳೆಸಬೇಕು. ಯಾರು ತನ್ನ ಆನಂದವನ್ನು ಸರ್ವತ್ರ ಇರುವ ಆನಂದದಲ್ಲಿ ಸೇರಿಸುತ್ತಾನೋ ಮತ್ತು ಸರ್ವತ್ರ ಇರುವ ಆನಂದದಲ್ಲಿ ಆನಂದ ಪಡೆಯುತ್ತಾನೋ ಅವನೇ ಸಮ ದೃಷ್ಟಿವಂತ.

ಜಗತ್ತು ಬ್ರಹ್ಮಮಯ, ಯಾವುದು ಪಿಂಡದಲ್ಲಿದೆಯೋ ಅದು ಬ್ರಹ್ಮಾಂಡ–ದಲ್ಲಿದೆ. ಪ್ರತಿಯೊಂದು ಪ್ರಾಣಿಯಲ್ಲಿಯೂ ಅದು ಏಕಬ್ರಹ್ಮ ರೋಮ ರೋಮದಲ್ಲಿ ಚರಾಚರದಲ್ಲಿ ಅದು ಒಂದೇ ತತ್ವ ಈ ಸತ್ಯವನ್ನು ತಿಳಿದು ಯಾರು ವ್ಯವಹಾರದಲ್ಲಿ ಬಳಸುತ್ತಾನೋ ಅವನು ಸಮದರ್ಶಿ, ಯೋಗಿ, ಅವನು ಸಂಸಾರದಲ್ಲಿ ಆನಂದವನ್ನು ಬಳಸುತ್ತಾನೆ. ಆನಂದವೇ ಆಗಿರುತ್ತಾನೆ. ಯಾರು ಧನ–ಬಲ–ವಿದ್ಯಾ ಇತ್ಯಾದಿಯ ಅಭಿಮಾನದಿಂದ ಭೇದವನ್ನು ನೋಡುತ್ತಾನೋ ಅವನು ತಿರಸ್ಕಾರ, ದ್ವೇಷ ಮತ್ತು ದಂಭದ ಭಾವ ಪಡೆಯುತ್ತಾನೆ. ಅವನು ಪರಮಾತ್ಮನನ್ನೇ ದ್ವೇಷ ಮಾಡುತ್ತಾನೆ. ಅವನ ಮನಸ್ಸಿಗೆ ಎಂದೂ ಶಾಂತಿ ದೊರಕಲಾರದು. ಮತ್ತೊಬ್ಬರಿಗೂ ಶಾಂತಿ ಉಂಟು ಮಾಡಲಾರನು.

ಯಾರು ಮತ್ತೊಬ್ಬರಿಗೆ ದುಃಖ ಉಂಟು ಮಾಡುತ್ತಾನೋ ಅವನು ಮತ್ತೊಬ್ಬರಿಂದ ದುಃಖ ಅನುಭವಿಸುತ್ತಾನೆ. ಆ ಕಾರಣದಿಂದ ಎಲ್ಲಾ ಪ್ರಾಣಿ–ಗಳೊಡನೆ, ಎಲ್ಲರೊಡನೆ ಉದಾರ ಸಮಾನ ಮತ್ತು ಪ್ರೇಮಮಯ ವ್ಯವಹಾರ ಮಾಡಬೇಕು. **''ಯೇಷಾಂ ಸಾಮ್ಯೇ ಸ್ಥಿತಂ ಮನಃ''** ಇದು ಸಾಮ್ಯವಾದದ ಮೂಲ ಮಂತ್ರ. ಸಂಸಾರದಲ್ಲಿ ಯಾರಿಗೂ ವಿಷಮತೆ ಉಂಟು ಮಾಡದಿರುವುದೇ ಸಮದರ್ಶನಕ್ಕೆ ಏಕಮಾತ್ರ ಉಪಾಯ.

ಸಮದರ್ಶನದಲ್ಲಿ ಯಾವವಿಧವಾದ ಮೋಸ, ಕಪಟ, ಕಕ್ಷಿ ಪ್ರತಿಕಕ್ಷಿ ಇರಬಾರದು. **ಯಸ್ಮಿನ್ ಸರ್ವಾಣಿ ಭೂತಾನಿ ಅತ್ಮೈವಾ ಭೂದ್ವಿಜಾನತಃ । ತತ್ರ ಕೋ ಮೋಹಃ ಕಃ । ಶೋಕಃ ಏಕತ್ವ ಮನುಪಶ್ಯತಃ ॥ ಈಶ** ॥ ಎಲ್ಲಾ ಪ್ರಾಣಿಗಳನ್ನು ತನ್ನ ಸ್ವರೂಪಾತ್ಮನಂತೆ ಸಮವಾಗಿ ತಿಳಿದರೆ ಅಂತಹವನಿಗೆ ಮೋಹ, ಶೋಕ ಮತ್ತು ದ್ವೇಷ ಎಲ್ಲಿರುತ್ತವೆ!

ಪರಮಾತ್ಮ ಸರ್ವತ್ರ ವ್ಯಾಪಕ ಅಥವಾ ಆತ್ಮನು ಸರ್ವತ್ರ ವ್ಯಾಪಕ **''ಇದಂ**

---

**''ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ''**
ಜ್ಞಾನಕ್ಕೆ ಸರಿಸಮಾನವಾದ ಯಾವ ಪವಿತ್ರ ವಸ್ತುಗಳು ಇಲ್ಲವೇ ಇಲ್ಲ.
(ಗೀತೆ 4–38)



**ಸರ್ವಮಾತ್ಮೈವ''** ಇದೆಲ್ಲಾ ಆತ್ಮವೇ ಆಗಿದೆ. ಒಂದೇ ಒಂದಾದ ಆತ್ಮ ಸಂಪೂರ್ಣ ಬ್ರಹ್ಮಾಂಡವನ್ನು ಆಚ್ಛಾದಿಸಿದೆ. ಆತ್ಮನ ಈ ಮಹತ್ತಾದ ಜ್ಞಾನವನ್ನು ತಿಳಿಯುವುದು ಕಠಿಣವಾದುದೇನಲ್ಲ. ಆದರೆ ವ್ಯವಹಾರದಲ್ಲಿ ಇದನ್ನು ಬಳಸುವುದು ಕಷ್ಟ. ಆತ್ಮನಿಂದಲೇ ಜೀವನ, ಆತ್ಮನಿಂದಲೇ ಜೀವನ ಜ್ಯೋತಿ, ಆತ್ಮನು ಅಮೃತನು, ಅವನು ಎಲ್ಲೆಲ್ಲಿಯೂ ಇದ್ದಾನೆ.

ಭಾಗವತದಲ್ಲಿ ಉತ್ತಮ ಭಕ್ತನ ಲಕ್ಷಣ ಇದೆ. **''ಸರ್ವ ಭೂತೇಷು ಯಃ ಪಶ್ಯೇದ್ಭಗವದ್ಭಾವಮಾತ್ಮನಃ । ಭೂತಾನಿ ಭಗವತ್ಯತ್ಮನೇಷ ಭಾಗವತೋತ್ತಮಃ ॥''** ಯಾರೂ ಸರ್ವಪ್ರಾಣಿಗಳಲ್ಲಿ ತನ್ನ ಭಗವಂತನನ್ನು ನೋಡುತ್ತಾನೋ ಮತ್ತು ಎಲ್ಲಾ ಪ್ರಾಣಿಗಳು ಭಗವಂತನೇ ಎಂದು ಭಾವ ಸ್ಥಿರ ಮಾಡಿಕೊಂಡಿರುತ್ತಾನೋ ಅವನೇ ಉತ್ತಮ ಭಕ್ತ ಮತ್ತು ಮುಕ್ತ.

ಅವ್ಯಕ್ತ ಪರಮಾತ್ಮನನ್ನು ಪ್ರಾಪ್ತಿ ಮಾಡಿಕೊಳ್ಳಲು ವ್ಯಕ್ತ ಪ್ರಾಣಿಗಳ ಸೇವೆ ಮಾಡುವುದು ವ್ಯಾವಹಾರಿಕ ಮತ್ತು ಸರಳ ಸಾಧನೆ. **''ವಾಸುದೇವ ಸರ್ವಮಿತಿ''** ಈ ಮಹಾಕಾವ್ಯವು ಪ್ರಾಣಿಗಳ ಸೇವೆಗಾಗಿಯೇ ಇದೆ. ಈ ಏಕತ್ವ ದೃಷ್ಟಿ ಅವ್ಯಕ್ತ ಪರಮಾತ್ಮನನ್ನು ವ್ಯಕ್ತ ಮಾಡಿಕೊಡುತ್ತದೆ. ಶ್ರೀಕೃಷ್ಣನು ಆತ್ಮ ಸ್ವರೂಪದಿಂದ ಸರ್ವ ಪ್ರಾಣಿಗಳಲ್ಲಿದ್ದೇನೆಂದು ವಿಭೂತಿ ಯೋಗದಲ್ಲಿ ಹೇಳಿದ್ದಾನೆ.

ಏಕತೆಯ ಫಲ ಮುಕ್ತಿ. ಅಂತಹ ಮಹಾನುಭಾವನ ಕರ್ಮ ಈಶ್ವರೀಯ ಕರ್ಮವಾಗಿರುತ್ತದೆ. ಅವನು ಈಶ್ವರನೇ ಆಗಿದ್ದು ಈಶ್ವರ ಕರ್ಮ ಮಾಡುತ್ತಾನೆ.

ಕಠೋಪನಿಷತ್ತಿನಲ್ಲಿ ಒಂದು ದೃಷ್ಟಾಂತವಿದೆ. ಪರ್ವತ ಶಿಖರಗಳ ಮೇಲೆ ಸುರಿಯುತ್ತಿರುವ ಮಳೆಯ ನೀರು ಅನೇಕ ಪ್ರವಾಹಗಳಲ್ಲಿ ಭಿನ್ನ–ಭಿನ್ನವಾಗಿ ಪರ್ವತದ ನಾಲ್ಕೂ ಕಡೆಗೂ ಹರಿಯುತ್ತದೆ. ಆದರೆ ಜಲದಲ್ಲಿ, ಸಮುದ್ರದಲ್ಲಿ ಬೀಳುವ ಜಲ ಅದರೊಡನೆ ಸೇರಿ ಒಂದೇ ಆಗುತ್ತದೆ. ಈ ಪ್ರಕಾರ ಅಜ್ಞಾನಿಯು ಅನೇಕ ಸಣ್ಣ ಸಣ್ಣ ಧಾರೆಗಳಲ್ಲಿ (ಪ್ರವಾಹಗಳಲ್ಲಿ) ಭ್ರಾಂತನಾಗಿ ತಿರುಗುತ್ತಿರುತ್ತಾನೆ. ಆದರೆ ಜ್ಞಾನಿಯು ಸಂಸಾರದ ಅನೇಕ ರೂಪಗಳಲ್ಲಿ ಒಂದಾಗಿ ಭಗವದ್ಭಾವ ರೂಪಿನ ಅಗಾಧ ಸಮುದ್ರದಲ್ಲಿ ಒಂದಾಗುತ್ತಾನೆ.

**ಉದಾ:** ಒಂದು ಸಾರಿ ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾದ ಏಕನಾಥಸ್ವಾಮಿಗಳು ಹರಿದ್ವಾರದ ಗಂಗಾತೀರ್ಥವನ್ನು ಎರಡು ಕೊಡಗಳಲ್ಲಿ ತುಂಬಿಕೊಂಡು ಎಲ್ಲಿಯೂ ಕೆಳಗಿಡದಂತೆ ಅಡ್ಡೆಯ ಮೇಲೆ ಹೊತ್ತುಕೊಂಡು ಭಕ್ತರೊಂದಿಗೆ ರಾಮೇಶ್ವರಕ್ಕೆ

---

**''ದೃಷ್ಟೀಂ ಜ್ಞಾನಮಯೀ ಕೃತಪಶ್ಯೇದ್ ಬ್ರಹ್ಮಮಯಂ ಜಗತ್''**
ನಮ್ಮ ದೃಷ್ಟಿ ಜ್ಞಾನಮಯವಾದರೆ ಜಗತ್ತೆಲ್ಲಾ ಬ್ರಹ್ಮಮಯವಾಗುತ್ತದೆ

ಗಂಗಾತೀರ್ಥದಿಂದ ಅಭಿಷೇಕ ಮಾಡಲು ತೆಗೆದುಕೊಂಡು ಹೋಗುತ್ತಿದ್ದರು. ಹಾಗೆ ರಾಜಸ್ಥಾನದಲ್ಲಿ ಬರುತ್ತಿರುವಾಗ ಒಂದು ಕತ್ತೆ ನೀರಿಲ್ಲದೆ ಸಾಯುವ ಸ್ಥಿತಿಯಲ್ಲಿ ಬಿದ್ದು ಒದ್ದಾಡುತ್ತಿತ್ತು. ಏಕನಾಥಸ್ವಾಮಿಗಳು ಆ ದೃಶ್ಯವನ್ನು ನೋಡಿ ಗಂಗಾಜಲವನ್ನೆಲ್ಲಾ ಆ ಕತ್ತೆಗೇ ಕುಡಿಸಿದರು. ಕತ್ತೆ ಶಕ್ತಿಶಾಲಿಯಾಗಿ ಕರುಣಾ ದೃಷ್ಟಿಯಿಂದ ನೋಡಿ ಆ ಕಡೆ ಹೋಯಿತು. ಭಕ್ತರೆಲ್ಲರೂ ಸ್ವಾಮಿ! ಇದೇನು ಮಾಡಿದಿರಿ? ರಾಮಲಿಂಗ ಅಭಿಷೇಕಕ್ಕೆ ಎಲ್ಲಿಯೂ ಕೆಳಗಿಡದೆ ತಂದ ಗಂಗಾಜಲ ಕತ್ತೆ ಪಾಲಾಯಿತೆ! ಎಂದರು. ಅದಕ್ಕೆ ಸ್ವಾಮಿಗಳು ಅಯ್ಯಾ! ರಾಮೇಶ್ವರದ ರಾಮಲಿಂಗವೇ ಕತ್ತೆ ರೂಪಿನಿಂದ ಕುಡಿದು ಸಂತೋಷಪಟ್ಟಿತು ಎಂದು ತಾವು ಸಂತೋಷಪಟ್ಟರು. ಇದೇ ಸರ್ವಭೂತಗಳಲ್ಲಿ ತನ್ನನ್ನು ತನ್ನಲ್ಲಿ ಸರ್ವಭೂತಗಳನ್ನು ನೋಡುವ ಸ್ಥಿತಿ.

**ಉದಾ.:** ಸ್ವಾಮಿ ಶಿವಾನಂದರು (ದಿವ್ಯ ಜೀವನ ಸಂಘ, ಹೃಷಿಕೇಶ) ಒಮ್ಮೆ ಧ್ಯಾನಕ್ಕೆ ಕುಳಿತಿದ್ದರು. ತುಂಬಾ ಸೊಳ್ಳೆ ಅವರನ್ನು ಮುತ್ತಿಕೊಂಡಿದ್ದವು. ಶಿಷ್ಯರೊಬ್ಬರು ಬಂದು ಸ್ವಾಮಿಗಳ ಮೇಲೆ ಸೊಳ್ಳೆ ಮುತ್ತಿದೆ ಎಂದು ಬೀಸಣಿಗೆ ಬೀಸಿ ಓಡಿಸಿದರು ಮತ್ತು ಸೊಳ್ಳೆ ಬರದಂತೆ ನೋಡುತ್ತಿದ್ದರು. ಸ್ವಾಮಿಗಳು ಕಣ್ಣುಬಿಟ್ಟು ಏನು ಮಾಡಿದೆ? ಎಂದರು. ಸೊಳ್ಳೆಗಳನ್ನು ಓಡಿಸಲು ಗಾಳಿ ಬೀಸುತ್ತಿದ್ದೇನೆ. ಬೇಡ, Let them engage in this body. They are all Gods ಎಂದರು. ಇದೇ ಏಕತ್ವಭಾವ.

ಇದು ಬ್ರಹ್ಮಭೂತನ ನಾಲ್ಕನೆ ಲಕ್ಷಣ.

ಪ್ರಸನ್ನಾತ್ಮನೂ, ಯಾವ ಚಿಂತೆಯೂ ಇಲ್ಲದವನೂ, ಏನನ್ನೂ, ಬಯಸದವನೂ, ಎಲ್ಲಾ ಭೂತಗಳನ್ನು ತನ್ನ ಸ್ವರೂಪವೆಂದು ನೋಡುವ ಬ್ರಹ್ಮಭೂತನಿಗಾಗುವ ಪರಮ ಪ್ರಯೋಜನವೇನು?

**"ಮತ್ಸರಾಮ್ ಭಕ್ತಿಂ ಲಭತೇ"** ನನ್ನ ಶ್ರೇಷ್ಠವಾದ ಭಕ್ತಿಯನ್ನು ಪಡೆದು-ಕೊಳ್ಳುತ್ತಾನೆ. ಇದು ಫಲಶ್ರುತಿ.

**ಪ್ರ.:** ಭಕ್ತಿ ಎಂದರೇನು?

ಸಾಮಾನ್ಯ ಜನರು ದೇವಸ್ಥಾನಕ್ಕೆ ಹೋಗುವುದು, ಪೂಜೆ ಮಾಡುವುದು, ತೆಂಗಿನಕಾಯಿ ಹೊಡೆಯುವುದನ್ನೇ ಭಕ್ತಿ ಎಂದು ಕೊಂಡಿದ್ದಾರೆ. ಇದೆಲ್ಲಾ ಭಕ್ತಿ ಅಲ್ಲ. ಇದು ಸಕರ್ಮ ಅಷ್ಟೆ. ಇನ್ನೂ ಕೆಲವರು ವಿಭೂತಿ ಧಾರಣೆ, ಗಂಧಧಾರಣೆ,

**"ತದ್ ವಿಜ್ಞಾನಾರ್ಥಂ ಸಗುರು ಮೇವಾಭಿ ಗಚ್ಛೇತ್ । ಸಮಿತ್ಪಾಣಿಃ ಶ್ರೋತ್ರೀಯಂ ಬ್ರಹ್ಮನಿಷ್ಠಂ"**
ಪರಮಾತ್ಮನನ್ನು ತಿಳಿಯಬೇಕಾದರೆ ಕೈಯಲ್ಲಿ ಸಮಿತ್ತನ್ನು ಹಿಡಿದುಕೊಂಡು ಶ್ರೋತ್ರೀಯ ಬ್ರಹ್ಮನಿಷ್ಠರಾದ ಸದ್ಗುರುವಿಗೇ ಶರಣಾಗಬೇಕು (ಮುಂಡಕ.ಉ.)



ರುದ್ರಾಕ್ಷಿ ಧಾರಣೆಯನ್ನೇ ಭಕ್ತಿ ಎನ್ನುತ್ತಾರೆ. ಇವೆಲ್ಲಾ ಭಕ್ತಿಯಲ್ಲ. ದೇಹದ ಮೇಲೆ ಧರಿಸಿರುವ ಸಾಧನಗಳಿಂದ ಭಕ್ತಿಯು ದೊರೆಯುವುದಿಲ್ಲ. ಭಕ್ತಿ ಎಂದರೆ ಒಂದಾಗುವುದು. ಯಾರೊಡನೆ? ಪರಮಾತ್ಮನೊಡನೆ. ಅವನೇ ನಾನೆನ್ನುವುದೇ ಭಕ್ತಿ.

**'ಸಾ ತ್ವಸ್ಮಿನ್ ಪರಮ ಪ್ರೇಮರೂಪಾ'** ಭಕ್ತಿಯು ಪರಮ ಪ್ರೇಮ ರೂಪವಾದುದು. ಪ್ರೇಮ ಯಾರಿಗಿಲ್ಲ? ಎಲ್ಲಾ ಪ್ರಾಣಿಗಳಲ್ಲಿ ಪ್ರೇಮವಿದೆ. ಸಿಂಹವು ಎಲ್ಲಾ ಪ್ರಾಣಿಗಳಿಗೂ ಭಯಂಕರವಾಗಿ ಕಂಡರೂ ತನ್ನ ಮರಿಗಳನ್ನು ಪ್ರೇಮಿಸುತ್ತದೆ. ಪ್ರೇಮವು ಸರ್ವರಿಗೂ ಅನುಭವವಿದೆ. ಒಬ್ಬರು ಮತ್ತೊಬ್ಬರನ್ನು ಪ್ರೇಮಿಸುತ್ತಾರೆ. ಗಂಡ ಹೆಂಡತಿಯನ್ನು ಪ್ರೇಮಿಸುತ್ತಾನೆ. ಸಾಮಾನ್ಯ ಜನಗಳೂ ವಿಷಯ ವಸ್ತುಗಳನ್ನು ಪ್ರೇಮಿಸುತ್ತಾರೆ. ಈ ಪ್ರೇಮವೆಲ್ಲಾ ಮಲಿನ ಪ್ರೇಮ. ಎಲ್ಲೆಲ್ಲಿಯೂ ಸ್ವಾರ್ಥತೆಯಿದೆ. ಪ್ರತಿಫಲಾಕಾಂಕ್ಷೆಯಿದೆ. ಇದೆಲ್ಲ ಪ್ರೇಮವಲ್ಲ. ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಪ್ರೇಮಿಸುವುದಕ್ಕೆ ಮೋಹವೆಂದು ಕರೆಯುತ್ತಾರೆ. ಏಕೆಂದರೆ ತನಗೆ ಬೇಕಾದಾಗ ಪ್ರೇಮಿಸುತ್ತಾರೆ. ಬೇಡವಾದಾಗ ಬಿಡುತ್ತಾರೆ. ಇನ್ನು ತಂದೆ ಮಗನನ್ನು ಪ್ರೇಮ ಮಾಡುತ್ತಾನೆ. ಇದು ವ್ಯಾಮೋಹ. ಏಕೆಂದರೆ ಮುಂದೆ ತನಗೆ ಅನುಕೂಲವಾದಾನೆಂಬ ಸ್ವಾರ್ಥತೆಯಿದೆ. ಆ ಪ್ರೇಮವು ಕುರುಡ, ಕುಂಟರ ಮೇಲೆ ಪ್ರಾಣಿಗಳ ಮೇಲೆ ಹರಿದರೆ ಅದಕ್ಕೆ ದಯಾ ಎನ್ನುತ್ತಾರೆ. ಆ ಪ್ರೇಮವು ಹಣ-ಆಸ್ತಿ, ಚಿನ್ನ ಇತ್ಯಾದಿಗಳ ಮೇಲೆ ಹರಿದರೆ ಜಿಪುಣತೆ ಎನ್ನುತ್ತಾರೆ. ಇವೆಲ್ಲಾ ಪರಮ ಪ್ರೇಮವಲ್ಲ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಯನ್ನು ಕೇಳುತ್ತಾರೆ. ಮೈತ್ರಾ! ನಾವು ಗೃಹಸ್ಥರಾಗಿದ್ದಾಗ ನೀನು ನನ್ನನ್ನು ಪ್ರೇಮಿಸುತ್ತಿರಲಿಲ್ಲವೇ? ಪ್ರೇಮಿಸುತ್ತಿದ್ದೆ. ಏತಕ್ಕಾಗಿ ಪ್ರೇಮಿಸುತ್ತಿದೆ? **"ಆತ್ಮಾನಸ್ತು ಕಾಮಾಯ ಪತಿಂ ಪ್ರಿಯಂ ಭವತಿ"** ನನಗಾಗಿ ನಿಮ್ಮನ್ನು ಪ್ರೇಮಿಸುತ್ತಿದ್ದೆ. ನೋಡಿ! ಪ್ರೇಮವು ಗೊತ್ತಿಲ್ಲದೆ ಎಷ್ಟು ಮೋಸ ಮಾಡುತ್ತಿದೆ.

ಒಂದು ಕೋತಿ ತನ್ನ ಮೂರು ಮರಿಗಳನ್ನು ಬಹಳ ಚೆನ್ನಾಗಿ ಪ್ರೇಮಿಸುತ್ತಿತ್ತು. ಅವುಗಳಿಂದ ಅದು ಅಗಲುತ್ತಿರಲಿಲ್ಲ. ಯಾವ ಕಾಡು ಪ್ರಾಣಿಗಳಿಗೂ ಸಿಕ್ಕದಂತೆ ಹಗಲೂ ಇರುಳೂ ರಕ್ಷಿಸುತ್ತಿತ್ತು. ಒಂದು ಸಾರಿ ಒಂದು ನದಿಯಲ್ಲಿ ಒಂದು ಬಂಡೆ ಮೇಲೆ ಮರಿಗಳೊಡನೆ ಕುಳಿತಿದೆ. ಮೇಲ್ಗಡೆ ಮಳೆಯಾಗಿ ಅನಿರೀಕ್ಷಿತ ನದಿ ಮೇಲೆ ತಪ್ಪಿ ಬಂದಿತು. ಬಂಡೆ ಸುತ್ತ ನೀರು ಬಂತು. ಕೋತಿಗೆ ಹೊರಗೆ ಹೋಗಲು

**"ಉತ್ತಿಷ್ಠಿತ ಜಾಗ್ರತಾ ಪಾಪವರಾನ್ನಿ ಭೋದಿತಾ"**
ಎಳಿ ಎದ್ದೇಳಿ ಜಾಗ್ರತರಾಗಿರಿ ಯೋಗ್ಯರಾದ ಶ್ರೋತ್ರೀಯ ಬ್ರಹ್ಮನಿಷ್ಠರಾದ ಗುರುಗಳನ್ನು ಸೇರಿ, ಉದ್ದಾರ ಮಾಡಿಕೊಳ್ಳಿರಿ (ಕಠ.ಉ.)

ದಾರಿಯಿಲ್ಲ. ಬಂಡೆ ಮೇಲಕ್ಕೆ ನೀರು ಬಂತು. ತನ್ನ ಮುದ್ದು ಮಕ್ಕಳನ್ನು ಅವಚಿ ಬೆನ್ನಿನ ಮೇಲೆ ಕೂಡಿಸಿಕೊಂಡು ರಕ್ಷಿಸಿತು. ಕೋತಿಯು ಮುಳುಗುವಂತೆ ನೀರು ಬಂತು. ಕೋತಿ ಪ್ರಯತ್ನ ಮಾಡಿ ಮುಖವನ್ನು ಎಷ್ಟು ಮೇಲೆತ್ತಿದರೂ ಪ್ರವಾಹ ಏರುತ್ತಿತ್ತು. ಆಗ ತನ್ನ ಒಂದು ಮರಿಯನ್ನು ತನ್ನ ಕಾಲಕೆಳಗೆ ಹಾಕಿ ಎತ್ತರವಾಗಿ ನಿಂತಿತು. ಮತ್ತೂ ನೀರು ಬಂತು ಮತ್ತೆ ಇನ್ನೊಂದು ಮರಿಯನ್ನು ಕೆಳಗೆ ಹಾಕಿ ನಿಂತಿತು. ಹೇಗಿದೆ ನೋಡಿ ಪ್ರೇಮ! ತನಗಾಗಿ ಉಳಿದವೆಲ್ಲಾ ಬೇಕು. ಆದ್ದರಿಂದ ಇದೆಲ್ಲಾ ಪ್ರೇಮವಲ್ಲ.

ನಾವು ಮಾಡುವ ಪ್ರೇಮವೆಲ್ಲಾ ಒಂದು ವ್ಯಾಪಾರ. ನಾವು ದೇವರನ್ನು ಪ್ರೀತಿಸುತ್ತೇವೆ. ಏಕೆ? ಅವನಿಂದ ಹೆಚ್ಚಿಗೆ ಲಾಭ ಪಡೆಯಲು, ನಾವು ದೇವರಿಗೆ ಒಂದು ರೂಪಾಯಿ ಕೊಟ್ಟರೆ ದೇವರು ನಮಗೆ ಬಡ್ಡಿ, ಚಕ್ರಬಡ್ಡಿ ಹಾಕಿ ಕೊಡುತ್ತಾನೆಂದು ನಿರೀಕ್ಷಿಸುತ್ತೇವೆ.

ಆದರೆ ಪರಮ ಪ್ರೇಮದಲ್ಲಿ ಈ ನಿರೀಕ್ಷಣೆಯಿಲ್ಲ. ನಮ್ಮ ಪ್ರೇಮವೆಲ್ಲಾ ಗಂಡ ಹೆಂಡತಿ ಮಕ್ಕಳು, ಮನೆ, ಆಸ್ತಿ, ಬಂಗಾರ, ಕಾರು, ಪ್ರಶಂಸೆಗಾಗಿ ಹರಿದು ಹೋಗಿದೆ. ಅದನ್ನೆಲ್ಲಾ ಒಟ್ಟುಗೂಡಿಸಿ ಪರಮಾತ್ಮನ ಕಡೆಗೆ ಹರಿಸುವುದೇ ಪರಮ ಪ್ರೇಮ. ಅದೇ ಭಕ್ತಿ; ನದಿ ಸಾಗರವನ್ನು ಸೇರುವಂತೆ ಭಕ್ತ ಪರಮಾತ್ಮನನ್ನು ಪ್ರೇಮಿಸುತ್ತಾನೆ. ಪರಮಾತ್ಮನನ್ನು ಪ್ರೇಮಿಸುವುದರಲ್ಲಿ ಅಂಜಿಕೆಯಿಲ್ಲ. ವ್ಯವಹಾರ ಪ್ರೇಮದಲ್ಲಿ ಅಂಜಿಕೆ ಇದೆ. ಪರಮಾತ್ಮನನ್ನು ಪ್ರೇಮಿಸುವಲ್ಲಿ ಅಸೂಯೆಯಿಲ್ಲ. ವ್ಯವಹಾರ ಪ್ರೇಮದಲ್ಲಿ ಅಸೂಯೆ ಇದೆ. ಈ ರೀತಿ ನಾನಾ ಕಡೆ ಹರಿದು ಹಂಚಿ ಹೋಗಿರುವ ಪ್ರೇಮವನ್ನು ಭಗವಂತ ಕಡೆಗೆ ಹರಿಸಿ ಅವನಲ್ಲಿ ತನ್ನನ್ನು ಸೇರಿಸಿಕೊಳ್ಳುವುದೇ ಪರಮ ಭಕ್ತಿ. ಪರಮಾತ್ಮ ಭಕ್ತಿ.

**ಉದಾ.:** ಒಂದು ಸಾರಿ ಭಗವಂತನಾದ ಶ್ರೀಕೃಷ್ಣನ ಶಿರದ ಮೇಲೆ ಒಂದು ಹುಣ್ಣಾಯಿತು. ಎಲ್ಲಾ ಔಷಧಿಗಳೂ ವ್ಯರ್ಥವಾದವು. ಅಶ್ವಿನೀಕುಮಾರರು ಬಂದು ನೆರವು ನೀಡಿದರು. ಹುಣ್ಣು ಉಲ್ಬಣಾ ಸ್ಥಿತಿಗೆ ಹೋಯಿತು, ಗುಣವಾಗಲಿಲ್ಲ. ಎಲ್ಲಾ ಜನರೂ ವ್ಯಾಕುಲ ಹೊಂದಿದರು. ಭಗವಂತನ ಹುಣ್ಣು ನಿವಾರಣೆಗೆ ಜಪತಪ ಸಾಧನಗಳೂ, ಯಜ್ಞ ಯಾಗಾದಿಗಳೂ ನಿರರ್ಥಕವಾದವು. ಋಷಿಗಳು–ಮಹಾತ್ಮರು ಭಕ್ತರು ಶ್ರೀಕೃಷ್ಣನನ್ನೇ ಪ್ರಾರ್ಥನೆ ಮಾಡಿ ಹುಣ್ಣು ನಿವಾರಣೆಗೆ ಉಪಾಯ ಕೇಳಿದರು. ಭಗವಂತನು ಉಪಾಯ ಹೇಳಿದ. ಯಾರಾದರೂ

**"ನ ಕರ್ಮಣಾನ ಪ್ರಜಯಾಧನೇನ ತ್ಯಾಗೇನೈಕೇ ಅಮೃತತ್ವ ಮಾನಶುಃ"**
ಕರ್ಮದಿಂದಾಗಲೀ, ಮಕ್ಕಳಿಂದಾಗಲೀ, ಹಣ, ವಸ್ತು, ವಾಹನ, ಹೆಂಡತಿಯಿಂದಾಗಲೀ ಶಾಂತಿ ಸುಖವಿಲ್ಲ. ಕೇವಲ ತ್ಯಾಗದಿಂದಲೇ ಅಮೃತತ್ವ ದೊರೆಯುವುದು (ಕೈವಲ್ಯ ಉ.)



ಪರಮಭಕ್ತರು ತಮ್ಮ ಪಾದ ಧೂಳಿಯನ್ನು ನನ್ನ ನೆತ್ತಿಯ ಮೇಲೆ ಹಾಕಿದರೆ ಹುಣ್ಣು ಗುಣ ಹೊಂದುತ್ತದೆ ಎಂದನು. ಯಾವ ಭಕ್ತರೂ ಭಗವಂತನ ಮೇಲೆ ತಮ್ಮ ಪಾದಧೂಳಿ ಹಾಕಲು ಒಡಂಬಡಲಿಲ್ಲ. ನಾರದ ಭಕ್ತರಿಗಾಗಿ ಅಹರ್ನಿಶ ಶ್ರಮಿಸಿದ ಯಾರೂ ದೊರೆಯಲಿಲ್ಲ. ಪುನಃ ಭಗವಂತನನ್ನೇ ಪ್ರಾರ್ಥಿಸಿದ. ನಾರದ! ಬೃಂದಾವನಕ್ಕೆ ಹೋಗಿ ಗೋಪಿಕೆಯರಿಗೆ ವಿಷಯ ತಿಳಿಸು ಎಂದ. ನಾರದನು ನೇರವಾಗಿ ಹೋಗಿ ವಿಷಯ ತಿಳಿಸಿದ್ದೇ ತಡ ಮುಗ್ಧರಾದ ಅವಿದ್ಯಾವಂತರಾದ, ಏನೂ ಅರಿಯದ ಗೋಪಿಕೆಯರು ಕಾಗದದಲ್ಲಿ ತಮ್ಮ ಪಾದಧೂಳಿ ಹಾಕಿಕೊಂಡು ಸಮುದ್ರವನ್ನು ಸೇರುವ ನದಿಯಂತೆ ಓಡೋಡಿ ದ್ವಾರಕೆ ಕಡೆ ಬಂದರು. ತಮ್ಮ ಪಾದಧೂಳಿ ಹಾಕಿದರು, ಹುಣ್ಣು ನಿವಾರಣೆಯಾಯಿತು. ನಾರದನು ಆಶ್ಚರ್ಯ–ಚಕಿತನಾದನು. ಯಾರು ತನ್ನ ಸುಖ ಶಾಂತಿ ಮುಕ್ತಿಯನ್ನು ಸಹ ವಿಶ್ವ ನಾರಾಯಣನಿಗೆ ಅರ್ಪಣೆ ಮಾಡುತ್ತಾರೋ ಅವರೇ ಪರಮಭಕ್ತರು. ಇಂತಹ ಮಹಾತ್ಮರು ಬಹಳ ದುರ್ಲಭ. ನಾರದರು ತಮ್ಮ ಭಕ್ತಿ, ಸೂತ್ರದಲ್ಲಿ ಭಕ್ತನು ಹೇಗಿರಬೇಕೆಂದು ಪ್ರಶ್ನೆ ಹಾಕಿ **"ಯಥಾ ವ್ರಜಗೋಪಿಕಾನಾಮ್"** ಭಕ್ತಿಯ ಅಗ್ರಸ್ಥಾನ ಗೋಪಿಕೆಯರಿಗೆ ದೊರೆಯುತ್ತದೆ ಎಂದಿದ್ದಾರೆ.

ಹಾಗೆಯೇ ಮುಗ್ಧನಾದ ಕಾಡುಮನುಷ್ಯ ಜಪತಪ ಯೋಗ ಯಜ್ಞ ಏನನ್ನೂ ಅರಿಯದ, ಕಾಡಿನಲ್ಲೇ ವಾಸ ಮಾಡುವ ಅಸಹ್ಯ ವಾಸನೆ ಹೊಡೆಯುವ ಬೇಡರ ಕಣ್ಣಪ್ಪ ದಾರಿಯಲ್ಲಿ ಅಸಹ್ಯ ಪದಾರ್ಥ ತುಳಿದು ಬಂದು ಅದೇ ಕಾಲಿನಿಂದ ಶಿವನ ಮೇಲಿನ ನಿರ್ಮಾಲ್ಯ ಒರೆಸುತ್ತಿದ್ದ. ಕೊಳಕು ಬಾಯಲ್ಲಿ ನೀರನ್ನು ತುಂಬಿಕೊಂಡು ಬಂದು ಶಿವನ ಮೇಲೆ ಎರಚುತ್ತಿದ್ದ. ಹಸಿಮಾಂಸವನ್ನು ಕಚ್ಚಿ ಕಚ್ಚಿ ಕಡಿದು ರುಚಿ ನೋಡಿ ಶಿವನಿಗೆ ಸಮರ್ಪಿಸುತ್ತಿದ್ದ. ಆದರೂ ತನ್ನನ್ನು ಪೂರ್ಣ ಭಗವಂತನಲ್ಲಿ ಸಮರ್ಪಿಸಿಕೊಂಡಿದ್ದ ಇವನೇ ಪರಮ ಭಕ್ತ.

ಆದ್ದರಿಂದ ಆತ್ಮೀಯರೇ! ಬ್ರಹ್ಮಪ್ರಾಪ್ತಿ ಮಾಡಿಕೊಂಡ ಬ್ರಹ್ಮ ಭೂತನು ಅಖಂಡಾನಂದದಲ್ಲಿ ತಲ್ಲೀನನಾಗುತ್ತಾನೆ. ಅವನು ಪೂರ್ಣಕಾಮನಾದುದರಿಂದ ಯಾವ ಅಪ್ರಾಪ್ತ ವಸ್ತುವಿನ ಬಯಕೆಯಾಗಲೀ ಅಥವಾ ಪ್ರಾಪ್ತ ವಸ್ತುವಿನ ಹಾನಿ ಸಂಬಂಧವು ಅವನಿಗೆ ಆಗುವುದೇ ಇಲ್ಲ. ಅವನು ಹರ್ಷ, ಶೋಕ, ಚಿಂತೆ ಮತ್ತು ಭಯದಿಂದ ಮುಕ್ತನಾಗಿರುತ್ತಾನೆ. ಎಲ್ಲೆಲ್ಲಿಯೂ ಬ್ರಹ್ಮಭಾವ ಇರುವುದರಿಂದ ಎಲ್ಲಾ ಪ್ರಾಣಿಗಳ ವಿಷಯದಲ್ಲಿ ಸಮಭಾವ ಹೊಂದಿರುತ್ತಾನೆ.

**"ಅಹಮಾತ್ಮ ಗುಡಾಕೇಶ ಸರ್ವಭೂತ ಶಯಸ್ಥಿತಃ"**
ಎಲ್ಲಾ ಭೂತಗಳಲ್ಲಿ ನಾನೆಂದು ವ್ಯಕ್ತವಾಗು ಆತ್ಮನೆ ಪರಮಾತ್ಮ, ಅದೇ ಭಗವಂತನ ನಿಜವಾದ ಸ್ವರೂಪ (ಗೀತೆ 10–20)

**ಆತ್ಮಾನಂ ಚೇತ್ ವಿಜಾನೀಯಾದಯ ಮಸ್ಮೀತಿ ಪುರುಷಃ ।**
**ಕಿಮಿಚ್ಛನ್ ಕಸ್ಯ ಕಾಮಾಯ ಶೀರರಮನು ಸಂಜ್ವರೇತ್ ॥**

ಜ್ಞಾನಿಯು ವಿಷಯ ಸುಖದಿಂದ ದೂರನಾಗಿ ಆತ್ಮಸುಖದಲ್ಲಿ ನಿಮಗ್ನನಾದರೆ ಆ ಪರಮ ಪುರುಷನೇ ತಾನೆಂದು ತಿಳಿಯುತ್ತಾನೆ. ಅವನು ಸಮಸ್ತ ರಸದಲ್ಲಿ ಭಗವದ್ ರಸದ ವ್ಯಾಪಕತೆಯನ್ನು ನೋಡಿ ತನ್ನನ್ನು ಬ್ರಹ್ಮಮಯನೆಂದು ನೋಡುತ್ತಾನೆ. ಆಗ ಅವನಿಗೆ ಯಾವ ಇಚ್ಛೆ ಇರುತ್ತದೆ? ಏತಕ್ಕಾಗಿ ಶರೀರ ಸಂಚಲಿಸುತ್ತಾನೆ? ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ.

**ಅಥಧೀರಾ ಅಮೃತತ್ವಂ ವಿಧಿತ್ವಾ ಧ್ರುವಮಧ್ರುವೇಷು ಇಹ ನ ಪ್ರಾರ್ಥಯಂತೇ ॥**
ಬ್ರಹ್ಮಭೂತ ಮಹಾತ್ಮನು ಅಮೃತತ್ವವನ್ನು ತನ್ನ ಸ್ವರೂಪವೆಂದು ನಿಶ್ಚಯವಾಗಿ ತಿಳಿದು ಅನಿತ್ಯವಾದ, ಅನಿಶ್ಚಯವಾದ ಸಂಸಾರಿಕ ಸುಖವನ್ನು ಎಂದೂ ಬೇಡುವುದೇ ಇಲ್ಲ ಎಂದು ಕಠೋಪನಿಷತ್ತೂ ಹೇಳುತ್ತದೆ.

ಯಾವ ಮಹಾಪುರುಷನ ಮನಸ್ಸು ಪ್ರಶಾಂತವಾಗಿರುತ್ತದೆಯೊ ಆ ಮನಸ್ಸೇ ಶಾಶ್ವತ ಸುಖವನ್ನು ಪೂರ್ಣ ಶಾಂತಿಯನ್ನು ಪಡೆದಿರುತ್ತದೆ. ಅದು ಬ್ರಹ್ಮವನ್ನು ತಿಳಿದು ಬ್ರಹ್ಮವೇ ಆಗಿರುತ್ತದೆ. ಬ್ರಹ್ಮವೇ ಆದ ಮನಸ್ಸು ತನಗಿಂತಲೂ ಭಿನ್ನವಾದ ಪದಾರ್ಥದ ಅಭಾವವನ್ನು ಕಂಡು ಕೊಂಡಿರುವುದರಿಂದ ಯಾವುದಕ್ಕೂ ಶೋಕಿಸುವುದಿಲ್ಲ. ತನಗಿಂತ ಉತ್ತಮ ಪದಾರ್ಥ ಮತ್ತೊಂದು ಇಲ್ಲವೆ ಇರುವುದರಿಂದ ಯಾವುದನ್ನು ಬಯಸುವುದೂ ಇಲ್ಲ. ಕರ್ತನೂ, ಕ್ರಿಯೆಯೂ, ಕರ್ಮವೂ, ಫಲವೂ, ಬ್ರಹ್ಮ ರೂಪವೇ ಆಗಿರುವುದರಿಂದ ಸಂಸಾರವೆಲ್ಲಾ ಬ್ರಹ್ಮಮಯವಾಗಿರುತ್ತದೆ. ಆಗ ಸರ್ವವನ್ನೂ ತನ್ನಲ್ಲಿ ತನ್ನನ್ನು ಸರ್ವದರಲ್ಲಿ ನೋಡುವುದರಿಂದ ಸಮತ್ವ ಸ್ಥಿತಿ ಪಡೆದಿರುತ್ತಾನೆ. ಅಂತಹ ಬ್ರಹ್ಮಭೂತಮಹಾತ್ಮನು ತನ್ನಲ್ಲೇ ಸುಖಿಸುತ್ತಾನೆ. ತನ್ನಲ್ಲೇ ವಿಹರಿಸುತ್ತಾನೆ.

ಬ್ರಹ್ಮಭೂತನ ಬ್ರಹ್ಮನಿರ್ವಾಣವು ಮತ್ತೊಬ್ಬರಿಂದ ಕೊಡಲ್ಪಡುವುದಲ್ಲ ; ಮತ್ತೊಬ್ಬರ ಆಶೀರ್ವಾದದಿಂದ ದೊರೆಯುವುದಿಲ್ಲ. ಇದು ಮಹತ್ಸಾಧನೆಯ ಪ್ರತ್ಯಕ್ಷಫಲ. ಇವನು ಸರ್ವರಿಗೂ ಹಿತ ಬಯಸುತ್ತಾನೆ. ಆದುದರಿಂದ ತಾನೂ ಹಿತನಾಗಿಯೇ ಇರುತ್ತಾನೆ. ಇವನ ಜೀವನವೇ ಸಾರ್ಥಕ ಜೀವನ. ಇವನ ಜೀವನ ಚರಿತ್ರೆಯ ರೇಖೆ ಎಂದೂ ಕ್ಷೀಣವಾಗುವುದಿಲ್ಲ. ಇವನ ಕರ್ಮ ಉಜ್ವಲ ಮತ್ತು ಪರಹಿತ ರೂಪವಾದುದು. ಇವನ ವಾಣಿ ಶ್ರೀಕೃಷ್ಣನ ವಂಶೀ ಧ್ವನಿಯಂತೆ ಮಧುರ

---

**"ಜಂತೂನಾಂ ನರಂ ಜನ್ಮ ದುರ್ಲಭಂ"**
ಜಗತ್ತಿನ ಎಲ್ಲಾ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಬಹು ದುರ್ಲಭ
(ವಿವೇಕ ಚೂಡಾಮಣಿ)



ಮತ್ತು ಪಾಂಚಜನ್ಯದ ಘೋಷದಂತೆ ಗಂಭೀರ ಮತ್ತು ಅವನ ಹೃದಯ ಪವಿತ್ರ-ಪ್ರಸನ್ನ-ವಿಶಾಲ-ಉದಾರ ಮತ್ತು ಕರುಣಾಮಯಿ, ಅವನ ಶರೀರವೂ ಬ್ರಹ್ಮಮಯವಾದುದರಿಂದ ಪೂಜಾರ್ಹವಾದುದು.

ಆದ್ದರಿಂದ ಆತ್ಮೀಯರೇ!

ಜಾಗೃತರಾಗಿರಿ, ತಮ್ಮ ಅಮೂಲ್ಯವಾದ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕಾಗಿ ಪ್ರಯತ್ನ ಶೀಲರಾಗಿರಿ. ಮನಸ್ಸನ್ನು ಪ್ರಶಾಂತ-ವಾಗಿಟ್ಟುಕೊಳ್ಳಿರಿ ; ಆಗ ನಿತ್ಯವಾದ ಅಕ್ಷಯ ಸುಖ ಪಡೆಯುತ್ತೀರಿ. ಶಾಂತಿಧಾಮ ಸೇರುತ್ತೀರಿ. ನಿಮ್ಮ ಪ್ರಶಾಂತವಾದ ಸಂತೋಷಯುಕ್ತ ಮನಸ್ಸು ಯಾವ ಮಿಥ್ಯಾ ಸಂಸಾರದ ಪದಾರ್ಥಗಳಿಗೂ ಶೋಕಿಸುವುದೇ ಇಲ್ಲ. ಮತ್ತಾವುದನ್ನೂ ಬೇಡುವುದೇ ಇಲ್ಲ. ನಂತರ ವರ್ಷ ಭೂತಗಳಲ್ಲಿ ತನ್ನನ್ನು ತನ್ನಲ್ಲಿ ಸರ್ವ ಭೂತಗಳನ್ನು ನೋಡುವ ಅಂದರೆ ಸರ್ವ ಭೂತಗಳ ಹಿತ ಚಿಂತಕರಾಗಿರಿ. ಇದೇ ಭಗವಂತನ ಸಮತ್ವ ಸ್ಥಿತಿ, ಇದೇ ಯೋಗ, ಇದೇ ಸ್ತಿರಬುದ್ಧಿ. ಈ ಸ್ಥಿರಬುದ್ಧಿಯನ್ನು ಶ್ರೀಗುರು ಕರುಣೆಯಿಂದ ಪಡೆದು ಅಪರೋಕ್ಷ ಬ್ರಹ್ಮ ಜ್ಞಾನಿಗಳಾಗಿ-ಬ್ರಹ್ಮಭೂತ ಸ್ಥಿತಿ ಪಡೆದು ಧನ್ಯರಾಗಿರಿ. ಆಗ ನಿಜವಾದ ಮಾನವರಾಗುತ್ತೀರಿ. ಉಳಿದವರೆಲ್ಲಾ ಮಾನವ ರೂಪಿನ ದಾನವರು.

ಜೀವಿತ ಕಾಲವು ಅತಿ ಸ್ವಲ್ಪ. ಆದರೆ ತಿಳಿದುಕೊಳ್ಳಬೇಕಾದ ವಿಷಯಗಳು ಅನೇಕ, ಸಾಧಿಸಬೇಕಾದ ಸಾಧನೆಗಳು ಅನೇಕ, ಸಾಧಿಸುವ ಕಾಲದಲ್ಲಿ ಬರುವ ವಿಘ್ನಗಳೂ ಅನೇಕ. ಸ್ಥಿತಿ ಹೀಗಿರುವುದರಿಂದ ಜಾಗೃತರಾಗಿರಿ. ಮೃತ್ಯುವು ಪ್ರತಿ ನಿಮಿಷವೂ ಜೀವನನ್ನು ಕಬಳಿಸುವುದಕ್ಕೆ ಸಿದ್ಧವಾಗಿ ನಿಂತಿದೆ. ವಾರ್ಧಿಕ್ಯ ಅಂದರೆ ಮುಪ್ಪು ರೋಗಾದಿಗಳು ಪ್ರಭಾವ ತನ್ನ ಮೇಲೆ ಬೀಳುವುದಕ್ಕೆ ಮುನ್ನ, ಮೃತ್ಯು ಮುಟ್ಟುವುದಕ್ಕಿಂತ ಮುನ್ನ, ಕೈಗೆ ಸಿಕ್ಕ ಮಾನವ ಜನ್ಮ ನಿರರ್ಥಕವಾಗುವುದಕ್ಕಿಂತ ಮುನ್ನ, ಶಾಸ್ತ್ರ ಜ್ಞಾನವನ್ನು ತಿಳಿಯುವುದಕ್ಕೆ ಶ್ರೋತ್ರೇಂದ್ರಿಯವು ಮಂದ-ವಾಗುವುದಕ್ಕಿಂತ ಮುನ್ನ, ನೇತ್ರೇಂದ್ರಿಯವು ಸರ್ವವೂ ಬ್ರಹ್ಮಮಯವಾಗಿದೆ ಎಂದು ನೋಡಲು ಮಂದವಾಗುವುದಕ್ಕಿಂತ ಮೊದಲು ನಿಮ್ಮನ್ನು ನೀವು ಸಾರ್ಥಕ ಮಾಡಿಕೊಂಡು ಬ್ರಹ್ಮೀಭೂತರಾಗಿರಿ.

ಈ ಶ್ಲೋಕ ಬಹು ಮಹತ್ತರ ಶ್ಲೋಕ. ಈ ಶ್ಲೋಕವನ್ನು ಸ್ಮರಿಸುತ್ತಾ, ಸ್ಮರಿಸುತ್ತಾ ಇದ್ದರೆ ಸಾಕು ಬ್ರಹ್ಮಭೂತರಾಗುತ್ತೀರಿ. ಗೀತಾ ಶ್ಲೋಕವು ಮಹಾಮಂತ್ರ. ಸ್ಮರಣೆ ಮಾಡುವುದರಿಂದಲೇ ಅದು ನಿಮ್ಮನ್ನು ರಕ್ಷಿಸುತ್ತದೆ.

---

**"ಮುಕ್ತಿರ್ನೋ ಶತಕೋಟಿ ಜನ್ಮ ಸುಕೃತೈಃ ಪುಣ್ಯೈರ್ವಿನಾ ಲಭ್ಯತೇ'**
ಮೋಕ್ಷವು ನೂರು ಕೋಟಿ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯವಿಲ್ಲದೇ
ಲಭಿಸುವುದಿಲ್ಲ (ವಿವೇಕ ಚೂಡಾಮಣಿ)

**ಬ್ರಹ್ಮಭೂತಃ ಪ್ರಸನ್ನಾತ್ಮಾ । ನಶೋಚತಿ ನಕಾಂಕ್ಷತಿ ।**

**ಸಮಃ ಸರ್ವೇಷು ಭೂತೇಷು । ಮದ್ಭಕ್ತಿಂ ಲಭತೇ ಪರಾಮ್ ॥ 18–54 ॥**

ಶ್ರೀ ಗುರುದೇವರ ಕರುಣೆಯಿಂದ ಶ್ರೀಕೃಷ್ಣ ಭಗವಂತನ ಅನುಗ್ರಹದಿಂದ ಗೀತಾಮಾತೆಯ ಕೃಪೆಯಿಂದ ನೀವೆಲ್ಲರೂ ಬ್ರಹ್ಮಭೂತ ಸ್ಥಿತಿ ಪಡೆದು ನಿತ್ಯ ನಿರಂತರ ಶಾಂತಿ–ಸುಖವನ್ನು ಅನುಭವಿಸುತ್ತಾ, ಈ ಶ್ಲೋಕದ ಭಾವವನ್ನು ತಾವೂ ಅನುಷ್ಠಾನ ಮಾಡಿ ಮತ್ತೊಬ್ಬರಿಗೂ ಅನುಷ್ಠಾನ ಮಾಡಲು ಪ್ರೋತ್ಸಾಹಿಸುವ ದಿವ್ಯ ಅವಕಾಶವು ನಿಮ್ಮೆಲ್ಲರಿಗೂ ದೊರೆಯಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಮುಗಿಯಿತು

* * * *

ಓಂ ನಮೋ ಭಗವತೇ ಶಂಕರಾನಂದಾಯ

# ಓಂ "ನಮಃ ಶಿವಾಯ" (ಮಂತ್ರಾರ್ಥ)

[ಶಿವರಾತ್ರಿಯ ಪ್ರಯುಕ್ತ ವಿಶೇಷ ಲೇಖನ]

–ಶ್ರೀ ಸಿ.ಶಂಕರಾನಂದಮೂರ್ತಿ, ಬೆಂಗಳೂರು

**ಭಾಷ್ಯ :– ಯಸ್ಮಾತ್ತ್ವಂ ನೇತಿನೇತೀತಿ ನಞರ್ಥಂ ಮಾಸಿ ವೇದಜಮ್ ।**

**ತಸ್ಮಾನ್ನಮೋऽಸಿ ಭದ್ರಂ ಮೇ ಯತೋ ಜಾತೋऽನಮೋ ನಮಃ ॥ 17 ॥**

**ಪದ ವಿಭಾಗ : ಯಸ್ಮಾತ್, ತ್ವಂ, ನೇತಿನೇತಿ, ಇತಿ, ನಞರ್ಥಂ, ಮಾ, ಅಸಿ, ವೇದಜಮ್, ತಸ್ಮಾತ್, ನಮಃ, ಅಸಿ, ಭದ್ರಂ, ಮೆ, ಯತಃ, ಜಾತಃ, ಅನಮಃ, ನಮಃ**

**ಯಸ್ಮಾತ್** – ಯಾವ ಕಾರಣದಿಂದ, **ತ್ವಂ** – ನೀವು, **ನೇತಿ ನೇತಿ** – ಇದು ಅಲ್ಲ ಇದು ಅಲ್ಲ, **ಇತಿ** – ಈ ಪ್ರಕಾರ, **ವೇದಜಂ** – ವೇದ ಜನ್ಯವಾದ, **ನಞರ್ಥಂ** – ಅಭಾವಾರ್ಥಕ, **ಮಾऽಸಿ** – ಆಗಿಲ್ಲ, **ತಸ್ಮಾತ್** – ಆ ಕಾರಣದಿಂದ, **ನಮಃ** – ನಮ, **ಅಸಿ** – ಆಗಿದ್ದೀರಿ, **ಭದ್ರಂ** – ಮಂಗಳವು, **ಮೇ** – ನನಗೂ ಆಗಲಿ, **ಯತಃ** – ಯಾವ ಕಾರಣದಿಂದ, **ಅನಯಃ** – ಅನಮನು, **ನಮಃ** – ನಮಸ್ಕಾರ, **ಜಾತಃ** – ಮಾಡುತ್ತಿದ್ದೇನೆ.

**"ನಮಃ ಶಿವಾಯ"** ಮಂತ್ರಕ್ಕೆ ಇದು ಏಳನೇ ವ್ಯಾಖ್ಯಾನ ಈಶ್ವರನನ್ನು ಪ್ರಾರ್ಥನೆ ಮಾಡುವುದೇ ಈ ಮಂತ್ರ ಭಾಷ್ಯ. ಹೇ ಮಹೇಶ್ವರ ನೀವು ಯಾವ





ಕಾರಣದಿಂದ ಪ್ರತ್ಯಕ್ಷವಾಗಿ ಕಾಣುವುದಿಲ್ಲ? ಪರಮೇಶ್ವರನು ಅಪರಿಚ್ಛಿನ್ನನು ಮತ್ತು ಅಪ್ರಮೇಯನು. ಆದ್ದರಿಂದ ಪರಮೇಶ್ವರನು ಕಾಣುವುದಿಲ್ಲ.

**ಪ್ರಶ್ನೆ : ಅಪರಿಚ್ಛಿನ್ನ ಎಂದರೇನು?**

**ಉ.:** ಪರಿಚ್ಛಿನ್ನವಲ್ಲದವನು ಅಪರಿಚ್ಛಿನ್ನ; ಯಾವುದೇ ವಸ್ತುವಾಗಲಿ ಒಂದು ದೇಶದಲ್ಲಿದ್ದು ಮತ್ತೊಂದು ದೇಶದಲ್ಲಿ ಇಲ್ಲದೆ ಹೋದರೆ ಅದು ಪರಿಚ್ಛಿನ್ನವಸ್ತು ಎಂದರೆ ತುಂಡು ತುಂಡಾದ ವಸ್ತು ಎಂದು ಕರೆಸಿಕೊಳ್ಳುತ್ತದೆ ಮತ್ತು ಯಾವುದೇ ಒಂದು ವಸ್ತುವಾಗಲಿ ಅದು ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿ ಇಲ್ಲದೆ ಹೋದರೆ ಅದು ಕಾಲಗತ ಪರಿಚ್ಛಿನ್ನತೆ ಉಳ್ಳದ್ದೆಂದು ಅರ್ಥ. ಯಾವುದೇ ವಸ್ತು ಮತ್ತೊಂದು ವಸ್ತುವಿಗಿಂತ ಬೇರೆ ಆಗಿದ್ದರೆ ಅದಕ್ಕೆ ವಸ್ತುಗತ ಪರಿಚ್ಛಿನ್ನತೆ ಉಳ್ಳದ್ದೆಂದು ಅರ್ಥ.

ಈ ರೀತಿ ಒಂದು ದೇಶದಲ್ಲಿದ್ದು ಮತ್ತೊಂದು ದೇಶದಲ್ಲಿಲ್ಲದ ವಸ್ತು. ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿಲ್ಲದ ವಸ್ತು. ಒಂದು ವಸ್ತುವಿನಂತೆ ಮತ್ತೊಂದು ವಸ್ತುವುವಿಲ್ಲದ ವಸ್ತುವೇ ಪರಿಚ್ಛಿನ್ನ ವಸ್ತುವೆಂದು ಕರೆಯುತ್ತಾರೆ.

**ಉದಾಹರಣೆಗೆ :** ಈ ದೇಹ–ಈ ಶರೀರ ಈಗ ಆಶ್ರಮದಲ್ಲಿದೆ. ಆ ರಸ್ತೆಯಲ್ಲಿಲ್ಲ. ಆದ್ದರಿಂದ ಇದಕ್ಕೆ ದೇಶಗತ ಪರಿಚ್ಛಿನ್ನತೆ ಅರ್ಥ ಮತ್ತು ಈ ಶರೀರ ಹಿಂದೆ ಇರಲಿಲ್ಲ; ಈಗ ಇದೆ, ಮುಂದೇ ಇರುವುದಿಲ್ಲ. ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿಲ್ಲದಿದ್ದರೆ ಇದಕ್ಕೆ ಕಾಲಗತ ಪರಿಚ್ಛಿನ್ನತೆ ಉಳ್ಳದ್ದೆಂದು ಕರೆಯುತ್ತಾರೆ; ಇನ್ನು ಈ ದೇಹವು ಘಟದಂತೆ ಇಲ್ಲ; ಘಟವು ದೇಹದಂತೆ ಇಲ್ಲ. ಆದ್ದರಿಂದ ಇದಕ್ಕೆ ವಸ್ತುಗತ ಪರಿಚ್ಛಿನ್ನತೆ ಇದೆ ಎಂದು ಅರ್ಥ. ಹೀಗೆ ಈ ದೇಹವು ಯಾವ ರೀತಿ ದೇಶಗತ–ಕಾಲಗತ–ವಸ್ತುಗತ ಪರಿಚ್ಛಿನ್ನತೆ ಉಳ್ಳದ್ದೋ ಹಾಗೆಯೇ ಈ ಪ್ರಪಂಚವೆಲ್ಲವೂ ಮೂರು ವಿಧವಾದ ಪರಿಚ್ಛಿನ್ನತೆ ಉಳ್ಳದ್ದು. ಯಾವುದು ಮೂರು ವಿಧವಾದ ಪರಿಚ್ಛಿನ್ನತೆ ಉಳ್ಳದ್ದಾಗಿರುತ್ತದೆಯೋ ಅದು ಇರುವಿಕೆ ಇಲ್ಲದೆ ತೋರುತ್ತದೆ ಎಂದು ಅರ್ಥ.

ಹಗ್ಗದಲ್ಲಿ ಭ್ರಾಂತಿ ಕಾಲದಲ್ಲಿ ತೋರುವ ಸರ್ಪವು ಯಾವ ರೀತಿಯಲ್ಲವೋ ಕಪ್ಪೆ ಚಿಪ್ಪಿನಲ್ಲಿ ಭ್ರಾಂತಿಯಿಂದ ಕಾಣುವ ಬೆಳ್ಳಿಯು ಯಾವ ರೀತಿ ಇಲ್ಲವೋ, ಮರುಮರೀಚಿಕೆ ಜಲವು ಯಾವ ರೀತಿಯಾಗಿ ಮೂರು ಕಾಲದಲ್ಲಿ ಇಲ್ಲವೆ ಇಲ್ಲವೋ ; ಈ ಜಗತ್ತೂ ಸಹಿತ ಮೂರು ಕಾಲದಲ್ಲಿ ಇಲ್ಲವೇ ಇಲ್ಲ.

**ಪ್ರ.: ಪರಮಾತ್ಮನು ಅಪ್ರಮೇಯ ಎಂದರೇನು?**

**ಉ.:** ಇಂದ್ರಿಯಗಳನ್ನು ಪ್ರಮಾಣವೆಂದೂ, ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳನ್ನು ಪ್ರಮೇಯವೆಂದೂ, ಈ ವಿಷಯಗಳನ್ನು ಅರಿಯುವ ಅಂತಃಕರಣವನ್ನು ಪ್ರಮಾತೃವೆಂದೂ ಕರೆಯುತ್ತಾರೆ. ಈ ಪ್ರಮಾಣ ಪ್ರಮೇಯ ಮತ್ತು ಪ್ರಮಾತೃಗಳೇ ತ್ರಿಪುಟಿಗಳು, ಯಾವ ವಸ್ತುವನ್ನು ನೋಡಬೇಕಾದರೂ ಈ ಮೂರು ಬೇಕೇ ಬೇಕು. ಇವರಲ್ಲಿ ಒಂದು ಕಡಿಮೆಯಾದರೂ ವಸ್ತುವು ಕಾಣುವುದಿಲ್ಲ. ಪ್ರಾಪಂಚಿಕ ವಸ್ತುಗಳನ್ನು ತಿಳಿಯಲು ಈ ಮೂರೇ ಸಾಧನಗಳು. ಶಿವನು ಇಂತಹ ಪ್ರಮಾಣ ಪ್ರಮಾತೃವಿಗೆ ತಿಳಿಯ ಬರುವವನಲ್ಲ. ಆದ್ದರಿಂದ ಅವನನ್ನು ಅಪ್ರಮೇಯ ಎಂದು ಭಗವದ್ಗೀತೆ ಉಪನಿಷತ್ತುಗಳು ಕರೆದಿವೆ.

ಮತ್ತು ಪ್ರತ್ಯಕ್ಷ, ಅನುಮಾನ, ಶಬ್ದ ಉಪಮಾನ, ಅನುಲಬ್ದಿ ಅರ್ಥಾಪತ್ತಿ ಪ್ರಮಾಣಗಳಿಗೂ ಶಿವನು ಗೋಚರಿಸಲಾಗಲಾರನು. ಆದ್ದರಿಂದ ಅವನು ಅಪ್ರಮೇಯನು.

**ಆಕ್ಷೇಪಣೆ :** ಈ ರೀತಿ ಆ ಶಿವನು ಅಪರಿಚ್ಛಿನ್ನನೆಂದೂ, ಅಪ್ರಮೇಯನೆಂದೂ ಹೇಳಿದ ಮೇಲೆ ಅವನನ್ನು ತಿಳಿಯಲಾಗುವುದಿಲ್ಲವೆಂದೇ ಹೇಳಿದಂತಾಯಿತು. ಆದರೂ ಉಪನಿಷತ್ತುಗಳು **"ತಂತೌ ಪನಿಷದಂ ಪುರುಷಂ ಪೃಚ್ಛಾಮಿ"** ಉಪನಿಷತ್ತಿನ ಮಾತುಗಳೆಂಬ ಪ್ರಮಾಣದಿಂದ ಪರಮಾತ್ಮನು ತಿಳಿದು–ಬರುತ್ತಾನೆಂದು ಉಪನಿಷತ್ತುಗಳು ಹೇಳುತ್ತವೆಯಲ್ಲಾ.

**ಸಮಾಧಾನ :** ಉಪನಿಷತ್ತುಗಳಲ್ಲಿ ಬೃಹದಾರಣ್ಯಕ ಉಪನಿಷತ್ತು ಸುಪ್ರಸಿದ್ಧವಾದುದು. ಅದು ನೇತಿ, ನೇತಿ ಇದು ಅಲ್ಲ, ಇದು ಅಲ್ಲ ಎನ್ನುವ **"ನಞನ್"** ವಿಷಯಗಳೆನ್ನೆಲ್ಲಾ ನಿಷೇಧಿಸಿಸುತ್ತದೆ.

**ಪ್ರ.: ಬೃಹದಾರಣ್ಯಕ ಉಪನಿಷತ್ತು ಹೇಗೆ ನಿಷೇಧಿಸುತ್ತದೆ? ಏಕೆ ನಿಷೇಧಿಸುತ್ತದೆ? ಏನನ್ನು ನಿಷೇಧಿಸುತ್ತದೆ?**

**ಉ.:** ಇದಕ್ಕೆ ಉಪನಿಷತ್ತು ಭಗವದ್ಗಿತೆ, ಬ್ರಹ್ಮಸೂತ್ರಗಳು ಎರಡು ದಾರಿಗಳನ್ನು ಹುಡುಕಿವೆ ಇಲ್ಲದ ವಸ್ತುವನ್ನು ಅಧ್ಯಾರೋಪ ಮಾಡುವುದು ; ಮತ್ತು ಅಧ್ಯಾರೋಪ ಮಾಡಿದ್ದನ್ನು ತೆಗೆದು ಹಾಕುವುದು.

**ಉದಾ.:** ಒಬ್ಬ ಚಿನ್ನದ ಕೆಲಸ ಮಾಡುವವನಿಗೆ ನೀವು 10 ಗ್ರಾಂ ಉಂಗುರ

---

**"ದುರ್ಲಭಂ ತ್ರಯಮೋ ವೈತದ್ವೈ ವಾನುಗ್ರಹ. ಹೇತುಕಮ್। ಮನುಷ್ಯತ್ವಂ ಮುಮುಕ್ಷತ್ವಂ ಮಹಾಪುರುಷ ಸಂಶ್ರಯಃ"** –ಭಗವಂತನ ಅನುಗ್ರಹಕ್ಕೆ ಕಾರಣೀಭೂತವಾದ ಈ ಮೂರು ಕಷ್ಟಸಾಧ್ಯವೇ ಮನುಷ್ಯ–ಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಮತ್ತು ಮಹಾತ್ಮರ ಸಂಗ (ವಿವೇಕ ಚೂಡಾಮಣಿ)



ಮಾಡಿಕೊಡಲು ಚಿನ್ನವನ್ನು ಕೊಟ್ಟಿದ್ದೀರೀ. ಆ ಅರ್ಕಸಾಲಿಯು ನಿಮ್ಮ 10 ಗ್ರಾಂ ಚಿನ್ನದ ಜೊತೆಯಲ್ಲಿ ತನ್ನದೇ ಆದ ಸ್ವಲ್ಪ ಭಾಗ ಚಿನ್ನವನ್ನು ಬೆರೆಸಿ ಎರಡನ್ನೂ ಕರಗಿಸುತ್ತಾನೆ. ನಂತರ ಆ ಗಟ್ಟಿಯಾದ ಬಂಗಾರದಲ್ಲಿ ನಿಮ್ಮ ಉಂಗುರ ಮಾಡುತ್ತಾನೆ. ನಂತರ ಉಜ್ಜಿ ಉಜ್ಜಿ 10 ಗ್ರಾಂ ಉಂಗುರ ಬರುವವರೆಗೆ ಉಜ್ಜುತ್ತಾನೆ. 10 ಗ್ರಾಂ ಬಂದ ಕೂಡಲೇ ನಿಮ್ಮ ಬಂಗಾರದ ಉಂಗುರ 10 ಗ್ರಾಂ ಕೊಡುತ್ತಾನೆ. ಇದನ್ನು ಶಾಸ್ತ್ರದಲ್ಲಿ **"ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಮುಚ್ಯತೇ"** ಎನ್ನುತ್ತಾರೆ.

**ಮತ್ತೊಂದು ಉದಾಹರಣೆ ನೋಡಿ :** ಒಬ್ಬ **"ಶಿಲಾ ಶಿಲ್ಪಿಯ"** ಹತ್ತಿರ ಗಣಪತಿ ವಿಗ್ರಹ ಮಾಡಲು ಒಂದು ಒರಟಾದ ಒಂದು ಶಿಲೆಯನ್ನು ಕೊಟ್ಟಿದ್ದೀರಿ. ಆ ಶಿಲ್ಪಿ ನಿಮಗೆ ಗಣಪತಿ ಮಾಡಿಕೊಡಬೇಕು. ಅವರು ಗಣಪತಿಯನ್ನು ಹೇಗೆ ಮಾಡಿ ಕೊಡುತ್ತಾರೆ? ಗಣಪತಿ ಅಲ್ಲದ ಕಲ್ಲನ್ನು ಮಾತ್ರ ತೆಗೆದು ಹಾಕುತ್ತಾರೆ. ತೆಗೆದು ಹಾಕಿದ ಮೇಲೆ ತೆಗೆದು ಹಾಕಲು ಬರದೆ ಇರುವ ಉಳಿದ ಗಣಪತಿಯನ್ನು ನಿಮಗೆ ಕೊಡುತ್ತಾರೆ. ಅವರು ನಿಜವಾಗಿ ಗಣಪತಿ ಮಾಡಿದ್ದರಾ? ಇಲ್ಲ. ಏನು ಮಾಡಿದರು? ಗಣಪತಿ ಅಲ್ಲದ ಕಲ್ಲನ್ನು ಕೆತ್ತಿ ತೆಗೆದು ಹಾಕಿ ಗಣಪತಿ ಬಂದ ತಕ್ಷಣ ಗಣಪತಿಯನ್ನು ಕೊಟ್ಟರು. ಅವರು ಗಣಪತಿಯನ್ನು ಮಾಡಿದರಾ? ಇಲ್ಲ ಏನು ಮಾಡಿದರು? ಗಣಪತಿ ಅಲ್ಲದ ಶಿಲೆಯನ್ನು ಕೆತ್ತಿ ತೆಗೆದು ಹಾಕಿ ಉಳಿದಿದ್ದನ್ನು ಗಣಪತಿ ಎಂದು ಕೊಟ್ಟರು.

ಹೀಗೆ ನಮ್ಮ ಬೃಹದಾರಣ್ಯಕ ಉಪನಿಷತ್ತು ನಿಷೇದ ಮುಖದಿಂದ **"ನೇತಿನೇತಿ" "ನ ಇತಿ, ನ ಇತಿ"** ಇದು ಅಲ್ಲ ಎಂದು ನಿಷೇದ ಮುಖದಿಂದ ಎಲ್ಲವನ್ನು ತೆಗೆದು ಹಾಕಿ ಪರಮಾತ್ಮ ಪ್ರಾಪ್ತಿ ಮಾಡಿ ಕೊಡುತ್ತದೆ.

**ಪ್ರ.: ನೇತಿ ನೇತಿ ಮಾರ್ಗದಿಂದ ಏನನ್ನು ನಿಷೇಧ ಮಾಡುತ್ತದೆ? ನಿಷೇಧ ಮಾಡಲು ಯಾವುದು ಯೋಗ್ಯ?**

**ಉ.:** ಶಿವನನ್ನು ಬಿಟ್ಟರೆ ಸರ್ವವೂ ಕಲ್ಪನಾ ವಸ್ತುವೆ. ಇದನ್ನು ಭಾಷ್ಯದಲ್ಲಿ **"ನಞರ್ಥಂ"** ಎಂದು ಕರೆದಿದೆ. ಕಲ್ಪನಾ ವಸ್ತುಗಳು – ತೆಗೆದು ಹಾಕುವ ಆ ವಸ್ತುಗಳು ಬಹಳ ಇವೆ. ಇವನ್ನು ಭಾಷ್ಯದಲ್ಲಿ **"ಮಾಽಸಿ ವೇದ ಜಮ್"** ಎಂದು ಕರೆದಿದ್ದಾರೆ. ವೇದಜಂ ಎಂದರೆ ಉಪನಿಷತ್ತುಗಳು, ಅದರಲ್ಲೂ ಬೃಹದಾರಣ್ಯಕ ಉಪನಿಷತ್ತು ನಿಷೇಧ ಮಾಡುತ್ತದೆ. ಏನನ್ನು ನಿಷೇಧಿಸುತ್ತದೆ? ಸಕಲ ಮೂರ್ತಾ ಮೂರ್ತಾತ್ಮಕವಾಗದೆ ಇರುವ ಆಕಾಶಾದಿ ಪ್ರಪಂಚವನ್ನು ನಿಷೇದಿಸುತ್ತದೆ.

---

**"ಕಿಂ ತೇನ ಅಶೃತ ಪಾಪಂ ಚೌರೇಣಾತ್ಮಾಪ ಹಾರಿಣಃ"** –ಯಾವನು ತಾನು ಆತ್ಮನಾಗಿದ್ದರೂ, ತಾನು ಆತ್ಮನೆಂದು ತಿಳಿಯದೆ ಹೋದರೆ ಅವನು ಎಲ್ಲಾ ಪಾಪವನ್ನು ಮಾಡಿದಂತೆಯೂ, ಆತ್ಮನನ್ನು ಕಳ್ಳತನ ಮಾಡಿದಂತೆ ಆಗುವುದು (ಅಭಿಜ್ಞಾನ ಶಾಕುಂತಲೆ)

ಪಂಚೀಕರಣವಾದ ಪಂಚಭೂತಗಳು ಪಂಚೀಕರಣವಾಗದೆ ಇರುವ ಮೂಲ ಭೂತಗಳನ್ನು ಮೂರ್ತಾ ಅಮೂರ್ತಾ ಎಂದು ಕರೆಯಲಾಗಿದೆ. ಪಂಚೀಕೃತ ಪಂಚ ಮಹಾಭೂತಗಳಿಂದ ಈ ಸ್ಥೂಲ ರೂಪ ಶರೀರಾದಿ ಈ ಸರ್ವ ವಿಶ್ವವೂ ಆಗಿದೆ. ಇದೇ ಮುರ್ತಾ ; ಸೂಕ್ಷ್ಮ ಪಂಚಮೂಲ ಭೂತಗಳಿಂದ ಅಂದರೆ ಅಪಂಚೀಕೃತ ಪಂಚ ಮಹಾಭೂತಗಳ ಸಮಷ್ಟಿ ಸತ್ತ್ವಗುಣದಿಂದ ಅಂತಃಕರಣವು, ವ್ಯಷ್ಟಿ ಸತ್ತ್ವ ಗುಣದಿಂದ ಪಂಚ ಜ್ಞಾನೇಂದ್ರಿಯಗಳೂ ಸಮಷ್ಟಿ ರಜೋಗುಣದಿಂದ ಪಂಚ ಪ್ರಾಣವಾಯುಗಳು, ವ್ಯಷ್ಟಿ ರಜೋಗುಣದಿಂದ ಪಂಚಕರ್ಮೇಂದ್ರಿಯಗಳು ಸೃಷ್ಟಿ ಆದವು. ಇವೇ ಅಮೂರ್ತಾಗಳು – ಇವೆಲ್ಲಾ ಅಧ್ಯಸ್ತ ಪದಾರ್ಥಗಳು.

**ಪ್ರ.: ಅಧ್ಯಸ್ತ ಪದಾರ್ಥಗಳು ಎಂದರೇನು?**

**ಉ.:** ಚಿನ್ನವು ಅಧಿಷ್ಠಾನ–ಆಭರಣವು ಅಧ್ಯಸ್ತ. ಆಭರಣ ಆಗುವುದಕ್ಕಿಂತಲೂ ಮೊದಲು ಇದ್ದು ಆಭರಣ ಆದ ಮೇಲೂ ಇದ್ದು – ಆಭರಣ ನಾಶವಾದ ಮೇಲೂ ಇರುವುದು ಅಧಿಷ್ಠಾನ. ಇಲ್ಲಿ ಚಿನ್ನವು ಅಧಿಷ್ಠಾನ – ಆಭರಣ ಅಧ್ಯಸ್ತ. ಮರದಿಂದಾದ ಕುರ್ಚಿಯಲ್ಲಿ – ಕುರ್ಚಿ ಆಗುವುದಕ್ಕೆ ಮುಂಚೆಯೂ ಇದ್ದು – ಕುರ್ಚಿ ಆದ ಮೇಲೂ ಇದ್ದು – ಕುರ್ಚಿಯು ನಾಶವಾದ ಮೇಲೂ ಇರುವುದು ಮರ ಒಂದೆ.

ಹೀಗೆಯೇ ಶಿವನು ಈ ಜಗತ್ತಿಗೆ ಉಪಾದಾನ ಕಾರಣನು. ಜಗತ್ತು ಹುಟ್ಟುವುದಕ್ಕೂ ಮೊದಲು ಇದ್ದ – ಜಗತ್ತಾಗಿ ಕಾಣುವಾಗಲೂ ಇದ್ದಾನೆ. ಜಗತ್ತು ನಿವೃತ್ತಿ ಆದ ಮೇಲೂ ಇರುತ್ತಾನೆ. ಶಿವನು ಅಧಿಷ್ಠಾನ – ಜಗತ್ತು ಅಧ್ಯಸ್ತ. ಜಗತ್ತು ಮೊದಲೂ ಇಲ್ಲ – ನಂತರವೂ ಇಲ್ಲ. ಜಗತ್ತಾಗಿ ಕಾಣುವಾಗಲೂ ಇಲ್ಲ. **"ಆದಿ ವಂತೇಚ ಯನ್ನಾಸ್ತಿವರ್ತಮಾನೇಪಿ ತತ್ತಥಾ"** ಆದಿ ಅಂತ್ಯದಲ್ಲಿ ಇಲ್ಲದೇ ಇರುವುದು ಮಧ್ಯದಲ್ಲಿ ಇರುವಂತೆ ಕಾಣುವಾಗಲೂ ಆಗಲೂ ಇಲ್ಲ. ಶಿವನೇ ಅಧಿಷ್ಠಾನ– ಜಗತ್ತು ಅಧ್ಯಸ್ತವಸ್ತು. ಇಲ್ಲವೇ ಇಲ್ಲವೆಂದು ಅರ್ಥ.

**ಆಕ್ಷೇಪಣೆ :** ಸ್ವಾಮಿ! ಚಕ್ಷುರಾದಿ ಪ್ರಮಾಣಗಳಿಗೆ ಗೋಚರಿಸುವ ಈ ವಿಶ್ವವು ಇಲ್ಲವೇ ಇಲ್ಲವೆನ್ನುತ್ತೀರಲ್ಲಾ, ಇದನ್ನು ಹೇಗೆ ನಂಬಲಿ? ಈ ಜಗತ್ತೇ ಇಲ್ಲವೆಂದ ಮೇಲೆ ನಾವಾದರೂ ಎಲ್ಲಿರುತ್ತೇವೆ? ನಮ್ಮ ತಿಳಿಯುವ ಬುದ್ಧಿಯಾದರೂ ಎಲ್ಲಿರುತ್ತದೆ? ಈ ಎಲ್ಲಾ ಕಾರಣಗಳಿಂದ ಜಗತ್ತು (ದೇಹಾದಿ ಪ್ರಪಂಚ) ಇರುತ್ತದೆ ಎಂದೇ ತಿಳಿಯಬೇಕಲ್ಲವೇ? ಮತ್ತು ಇದು ಪ್ರತ್ಯಕ್ಷವಾಗಿ ಕಾಣುತ್ತದೆಯಲ್ಲವೆ?

**"ಸರ್ವ ಸಂಕಲ್ಪ ಸಂನ್ಯಾಸೀ ಯೋಗಾರೂಢ ಸ್ತದೋಚ್ಯತೇ"**
ಯಾರು ಸರ್ವಸಂಕಲ್ಪಗಳನ್ನು ತ್ಯಜಿಸಿದವನನ್ನು ಯೋಗಾರೂಢನೆಂದು
ಕರೆಯುತ್ತಾರೆ (ಗೀತೆ 6–4)



**ಸಮಾಧಾನ :** ವ್ಯವಹಾರದಲ್ಲಿ ನಾವು ಧಾನ್ಯವನ್ನು ಅಳತೆ ಮಾಡಲು ಒಂದು ತಕ್ಕಡಿ ಇಟ್ಟುಕೊಳ್ಳುತ್ತೇವೆ. ಒಂದು ಕಡೆ ಕಲ್ಲು ಇರುತ್ತದೆ. ಮತ್ತೊಂದು ಕಡೆ ಧಾನ್ಯವನ್ನು ಹಾಕುತ್ತಾರೆ. ಆ ಕಲ್ಲಿನ ತೂಕಕ್ಕೆ ಸರಿಯಾಗಿ ಧಾನ್ಯವನ್ನು ಹೆಚ್ಚು ಕಡಿಮೆ ಮಾಡುತ್ತೇವೆ. ಕಡಿಮೆ ಆದರೆ ಧಾನ್ಯವನ್ನು ಹಾಕುತ್ತೇವೆ. ಹೆಚ್ಚಾದರೆ ತೆಗೆಯುತ್ತೇವೆ. ಹೀಗೆ ಸರಿ ಮಾಡಿ ತಕ್ಕಡಿಯಲ್ಲಿ ಧಾನ್ಯವನ್ನು ತೂಗುತ್ತೇವೆ. ಇಲ್ಲಿ ಒಂದು ವಿಷಯ ಕಲ್ಲು ಒಂದೇ ಧಾನ್ಯವು ಅನೇಕ ಮತ್ತು ಧಾನ್ಯವನ್ನು ತೂಕ ಮಾಡುವ ಆ ತಕ್ಕಡಿ ನಿಲಿಪ್ತ. ಎಷ್ಟು ಧಾನ್ಯ ತೂಕ ಮಾಡಿದರೂ ಏನನ್ನು ಅದು ಅಂಟಿಸಿಕೊಳ್ಳುವುದಿಲ್ಲ; ಹಾಗೆಯೇ ನೀವೂ ಕೂಡ ಈ ಜಗತ್ತನ್ನು ವಿವಿಕ್ತ ರೂಪದಿಂದ ಜಗತ್ತು ಇದೆ–ಇದೇ ಎಂದು ಪ್ರಕಟ ಪಡಿಸುತ್ತೀರಿ. ನಂತರ ಆ ಕಲ್ಲಿನ ತೂಕಕ್ಕೆ ಸರಿಯಾಗಿ ತೆಗೆಯುತ್ತೀರಿ, ನಂತರ ಲಯ ಮಾಡುತ್ತಾ ಹೋಗುತ್ತೀರಿ. ಇದು ನಾನಲ್ಲ– ಇದು ನಾನಲ್ಲ ಎಂದು ತೆಗೆಯುತ್ತಾ ಹೋಗುತ್ತೀರಿ. ಇದೇ ನಿಷೇಧ, ಪ್ರಾಪಂಚಿಕ ವಸ್ತುವಿನಲ್ಲಿ ವಾಸ್ತವವಾಗಿ ಅಸಂಗತವಾಗಿರುತ್ತೀರಿ – ನೀವು ಏಕರಸರು, ಸಚ್ಚಿದಾನಂದ ರೂಪರು, ಲೋಕವೆಲ್ಲವು ಒಂದೇ ರೀತಿ ಇರುವುದಿಲ್ಲ.

**ಇನ್ನೊಂದು ಉದಾಹರಣೆ :** ಒಂದು ಬಿಳಿ ವಸ್ತ್ರಕ್ಕೆ ಹರಿಸಿನ ಬಣ್ಣ ಹಾಕಲಾಗಿದೆ ನಿಮಗೆ ಹರಿಶಿನ ಬಣ್ಣ ಕಾಣುತ್ತದೆಯೋ ವಿನಃ ಆ ವಸ್ತ್ರ ಕಾಣುವುದಿಲ್ಲ. ಹರಿಶಿನ ಬಣ್ಣವು ಆ ಬಟ್ಟೆ ಇಲ್ಲದೆ ಹೋಗಿದ್ದರೆ ಆ ಬಣ್ಣ ಕಾಣುತ್ತದೆಯೇ? ಇಲ್ಲವೇ ಇಲ್ಲ, ಹಾಗೆ ಜಗದ್ರೂಪ ಬಣ್ಣ ಕಾಣುತ್ತದೆಯೇ ವಿನಃ ಆ ಜಗತ್ತು ಯಾವುದರ ಅಧಿಷ್ಠಾನದಲ್ಲಿದೆ ಎನ್ನುವುದು ಕಾಣುವುದೆ ಇಲ್ಲ. ಅದೇ ರೀತಿಯಿಂದ ಸ್ತ್ರೀ ಪುರುಷಾಧಿ ವಿಷಯದ ಸಂಯೋಗವು ಅಂತಃಕರಣದಲ್ಲಿ ವಾಸನಾ ರೂಪದಿಂದ ಹರಿಶಿನ ಬಣ್ಣದಂತೆ ಅಂಟಿಕೊಂಡಿದೆ. ಅದೇ **"ನಇಇನ್"** ಇಲ್ಲ ಅಂದರೆ ನೇತಿ, ಅಂದರೆ ಆ ಬಣ್ಣವನ್ನು ನಿಷೇಧ ಮಾಡುತ್ತದೆ. ಈ ಕಾರಣದಿಂದ ನೀವು **"ನಮಃ"** ಎಂದು ಹೇಳಿಸಿಕೊಳ್ಳುತ್ತೀರಿ.

**ಪ್ರ.: ಯಾವುದನ್ನು ನಿರ್ದೇಶ ಮಾಡಲು "ನಮಃ" ಎನ್ನುತ್ತೀರಿ?**

**ಸಮಾಧಾನ :** ನೇತಿ ನೇತಿ ಎಂದು ಯಾವುದನ್ನು ತೆಗೆದು ಹಾಕುತ್ತೇವೆಯೋ ಅಂತಹ ತೆಗೆದು ಹಾಕುವ ಮಿಥ್ಯಾ ವಸ್ತುವನ್ನು, ಇಲ್ಲದ ವಸ್ತುವನ್ನು ನಿರ್ದೇಶಿಸಲು ಬಂದಿಲ್ಲ. ಅದು ಅಲ್ಲ ಎಂಬುದನ್ನು ನಿರಾಕರಣ ಮಾಡುತ್ತಾ ಬರುತ್ತದೆ. ಅದೇ ರೀತಿಯಾಗಿ ಸಕಲ ಉಪಾಧಿಗಳನ್ನು ನಿರಾಕರಣ ಮಾಡುತ್ತಾ ಹೋಗಿ

**"ಆಚಾರ್ಯ ದೈವ ವಿದ್ಯಾ ವಿದಿತಾ ಸಾಧಿಷ್ಟಂ ಪ್ರಾಪ್ತಯತಿ"**
ಶ್ರೀ ಗುರುಗಳಿಂದ ಕಲಿತಂತಹ ವಿದ್ಯೆಯು ಮುಕ್ತಿಯನ್ನೇ ಕೊಡುತ್ತದೆ
(ಛಂದೋಗ್ಯ ಉ.)

ಯಾವುದನ್ನು ನಿರಾಕರಣ ಮಾಡಲು ಆಗುವುದಿಲ್ಲವೋ ಎಲ್ಲಿ ನೇತಿ ನೇತಿಯು ನಿಂತು ಹೋಗುತ್ತದೆಯೋ ಆ ಏಕರಸವಾದ ಪ್ರಜ್ಞಾನ ಘನವಾದ – ಬಾಹ್ಯಾಂತರ ರಹಿತವಾದ – ಸತ್ಯಕ್ಕೂ ಸತ್ಯವಾದ ಆ ಬ್ರಹ್ಮವೇ "ನಾನು" ಎಂಬ ರೂಪದಲ್ಲಿ ಉಳಿಯುತ್ತದೆ. ಅದೇ **"ನಮಃ"** ಅದೇ ಶಿವ–ಅದೇ ಬ್ರಹ್ಮ– ಆಗ ಬುದ್ಧಿಯು ಎಲ್ಲವನ್ನು ನಿರಾಕರಣ ಮಾಡಿ ಆ ಬ್ರಹ್ಮದಲ್ಲಿ – ತಾನೂ ಒಂದಾಗುತ್ತದೆ.

**ಪ್ರ: ಹೇಗೆ ಒಂದಾಗುತ್ತದೆ– ಬುದ್ಧಿಯು ಜಡವಸ್ತು ಅದು "ನಾನು" ಎಂಬ ಬ್ರಹ್ಮಚೈತನ್ಯದಲ್ಲಿ ಹೇಗೆ ಒಂದಾಗುತ್ತದೆ?**

**ಉ.: "ಸರ್ವಂ ಖಲ್ವಿದಂ ಬ್ರಹ್ಮ" "ಯೇನ ಸರ್ವಮಿದಂ ತತಮ್" "ವಾಸುದೇವ–ಸರ್ವಮಿತಿ"** ಅಂದರೆ ಇರುವುದು ಒಂದೇ ಒಂದಾದ ವಸ್ತು ಅದನ್ನು ಸರಿಯಾಗಿ ತಿಳಿಯದೆ ಜಗತ್ತೆಂದೂ ಬುದ್ಧಿ ಎಂದು ಕಲ್ಪನೆ ಮಾಡಿದ್ದೆವು. ಈಗ ಏಕ ರಸವಾದುದರಿಂದ ಉಪ್ಪಿನ ಗೊಂಬೆಯು ನೀರಿನಲ್ಲಿ ಒಂದಾಗುವಂತೆ ಬುದ್ಧಿಯು ಬ್ರಹ್ಮದಲ್ಲಿ ಒಂದಾದರೆ ದ್ವೈತಕ್ಕೆ ಅವಕಾಶವೇ ಇಲ್ಲ. ಇರುವುದು ಒಂದೇ ಒಂದು ಅದೇ ನಾನು – ಅದೇ ಬ್ರಹ್ಮ – ಅದೇ ಶಿವ – ಅದೇ ನಮಃ.

ಈ ಬ್ರಹ್ಮವನ್ನು **"ನ ಇತಿ" "ನ ಇತಿ"** ಎಂದು ತೆಗೆದು ಹಾಕಿದರೆ ಅಂದರೆ ನಾಮ ರೂಪವನ್ನು ತೆಗೆದು ಹಾಕಿದರೆ ಉಳಿಯುವುದು ಅಸ್ತಿ ಭಾತಿ ಪ್ರಿಯ ಮಾತ್ರ ಉಳಿಯುತ್ತದೆ.

ಇದನ್ನು ಸಮಂಜಸವಾಗಿ ತಿಳಿಯಿರಿ : –

ಪುಸ್ತಕವು ಇದೆ, ಪುಸ್ತಕವು ಕಾಣುತ್ತದೆ. ಪುಸ್ತಕವು ಓದಲು ಬೇಕಾಗಿದೆ ; ಹಾಗೆಯೇ ದೇಹವು ಇದೆ, ದೇಹವು ತೋರುತ್ತದೆ – ಬ್ರಹ್ಮಜ್ಞಾನ ಪಡೆಯಲು ಬೇಕಾಗಿದೆ ; ಹೀಗೆಯೇ ಪೆನ್ನು ಇದೆ – ಪೆನ್ನು ತೋರುತ್ತದೆ – ಬರೆಯಲು ಬೇಕಾಗಿದೆ. ಹೀಗೆ ಈ ಅಸ್ತಿ, ಭಾತಿ, ಪ್ರಿಯ ಮೂರು ಎಲ್ಲೆಲ್ಲಿಯೂ ಇವೆ. ಇವೇ ಅಸ್ತಿ, ಭಾತಿ ಪ್ರಿಯ, ಇವು ಪರಮಾತ್ಮನ ಇರುವನ್ನು ನಿರ್ದೇಶಿಸುತ್ತವೆ. ಆದರೆ ನಾಮರೂಪಗಳು ಬೇರೆ ಬೇರೆ ಇವೆ. ಪುಸ್ತಕದ ನಾಮರೂಪ ದೇಹಕ್ಕಿಲ್ಲ – ದೇಹದ ನಾಮರೂಪ ಪೆನ್ನಿಗಿಲ್ಲ. ಇವು ಅಂದರೆ ಈ ನಾಮ ರೂಪಗಳು ವ್ಯಭಿಚಾರಿಗಳು – ಇವು ಮಾಯೆಗೆ ಸಂಬಂಧಪಟ್ಟವು. ಇವು ಮಿಥ್ಯಾ ರೂಪದಲ್ಲಿ ತೋರುತ್ತದೆ. ಇವುಗಳನ್ನು ನಿಷೇಧಿಸಿದರೆ ಶಿವನು ಎಲ್ಲೆಲ್ಲಿಯೂ ಇದ್ದಾನೆ. ಇದೇ

---

**"ಚಿತ್ತಸ್ಯ ಶುದ್ಧಯೋ ಕರ್ಮ ನತು ವಸ್ತೂಪಲಬ್ಧಯೋ ಸ್ತು ಸಿದ್ಧಿರ್ವಿಚಾರೇಣ ನ ಕಿಮಚಿತ್ ಕರ್ಮಕೋಟಿಭಿಃ"**
ಕರ್ಮವು ಚಿತ್ತಶುದ್ಧಿಗಾಗಿ ಮಾತ್ರ ಇದೆ. ಆದರೆ ಪರಬ್ರಹ್ಮನ ಸಾಕ್ಷಾತ್ಕಾರ ಹೊಂದುವುದಕ್ಕೆ ಅಲ್ಲ. ಪರಬ್ರಹ್ಮನ ಸಾಕ್ಷಾತ್ಕಾರವು ವಿಚಾರದಿಂದ ಮಾತ್ರ ಉಂಟಾಗುವುದೆ ವಿನಃ, ಕೋಟಿ ಕರ್ಮಗಳಿಂದಲೂ ಆಗುವುದಿಲ್ಲ
(ವಿವೇಕ ಚೂಡಾಮಣಿ)



ಎಂಬುದೇ ಸತ್ತು. ತೋರುತ್ತದೆ – ಚಿತ್ತು, ಬೇಕಾಗಿದೆ – ಆನಂದ – ಸತ್ತು ಚಿತ್ತು ಆನಂದವು ಪರಮಾತ್ಮನನ್ನು ನಿರ್ದೇಶಿಸುತ್ತವೆ. ಅದೇ ಸಚ್ಚಿದಾನಂದ ಪರಬ್ರಹ್ಮ. ಅದೇ ನಮಃ ಶಬ್ದದ ಅರ್ಥ; ಸರ್ವವನ್ನು ನಿಷೇಧ ಮಾಡಿ ನಿಷೇಧ ಮಾಡಲು ಆಗದೆ ಇರುವ ಅಧಿಷ್ಠಾನವೇ "ನಮಃ" ಶಬ್ದದ ಅರ್ಥ. 'ಅನಮ' ಎಂದರೆ ನಿಷೇಧ ಮಾಡಲು ಯೋಗ್ಯವಾದ ವಸ್ತು "ನಮಃ" ಎಂದರೆ ಪರಬ್ರಹ್ಮ. ಅದೇ ನಾನು – ಇದೇ ಅಪರಿಚ್ಛಿನ್ನ ವಸ್ತು.

**"ಓಂ ತತ್ಸತ್"**

# ಕೈವಲ್ಯ ಪದ್ಧತಿ

**– ಡಾ. ಸಿ. ಆನಂದಕುಮಾರ್, ಬೆಂಗಳೂರು**

ಶ್ರೀಮನ್ನಿಜಗುಣರು 15ನೇ ಶತಮಾನದ ಒಬ್ಬ ಶ್ರೇಷ್ಠ ದಾರ್ಶನಿಕರು. ಅವರು ಈಗಿನ ಕೊಳ್ಳೇಗಾಲದ ಸಮೀಪದಲ್ಲಿದ್ದವರು. ಅಲ್ಲಿ ಶ್ರೀ ಶಂಭುಲಿಂಗ ದೇವಸ್ಥಾನವಿದೆ. ಪಕ್ಕದಲ್ಲಿ ಒಂದು ಸಣ್ಣ ಬೆಟ್ಟವಿದೆ. ಅವರು ಸರ್ವವನ್ನು ತ್ಯಾಗ ಮಾಡಿ ರಾಜ್ಯ ಕೋಶ ಎಲ್ಲವನ್ನು ರಾಜ ಭರ್ತುಹರಿಯಂತೆ ತ್ಯಾಗ ಮಾಡಿ ತಪಸ್ಸಿದ್ಧಿಯನ್ನು ಪಡೆದವರು ಅವರ ಮೊದಲನೇ ಗ್ರಂಥ ಕೈವಲ್ಯ ಪದ್ಧತಿಯನ್ನು ಬರೆದು ಆಗಿನ ಜನಗಳಿಗೆ, ಭಕ್ತರಿಗೆ ನಿವೇದಿಸಿದರು. ಶ್ರೀ ಶಂಭುಲಿಂಗನ ಹೆಸರಿನಿಂದ ಅವರ ಕಾವ್ಯ ರಚನೆ ಆಯಿತು.

**ಶ್ರೀ ಗುರು ಶಂಭುಲಿಂಗನ ಪಾದ ಪಂಕಜ ವೀಗೆಮ್ಮಮತಿಗೆ ಮಂಗಳವನ್ನು,** ಇಲ್ಲಿ ಆರಂಭದಲ್ಲಿ ಶ್ರೀ ಗುರುವನ್ನು ಧ್ಯಾನಿಸುತ್ತಾರೆ. ಮೊದಲು ಶ್ರೀ ಗುರುವಿಗೆ ನಮಸ್ಕಾರ, ನಂತರ ಶಿವನಿಗೆ ನಮಸ್ಕಾರ, ಗುರುವನ್ನು ನೆನೆಯುವುದಕ್ಕೆ ಮೊದಲು **'ಶ್ರೀ'** ಎಂಬ ವಿಶೇಷಣ ಸೇರಿಸಿದ್ದಾರೆ. ಶ್ರೀ ಸಾಮಾನ್ಯ ಪದವಲ್ಲ. ಗಂಭೀರವಾದ ಅರ್ಥವುಳ್ಳ ಪದ ಗುರುಗಳಲ್ಲಿ ಶ್ರೀ ಗುರು ಸಿಕ್ಕುವುದು ಕಷ್ಟ. ಶ್ರೀ ಸ್ವಾಮಿ ವಿವೇಕಾನಂದರಿಗೆ ಶ್ರೀ ಗುರು ಸಿಕ್ಕಲೇ ಇಲ್ಲ. ಯಾರೋ ಮಹಾತ್ಮರು ಅವರನ್ನು ಕಲ್ಕತ್ತದ ದಕ್ಷಿಣೇಶ್ವರಕ್ಕೆ ಕಳಿಸಿದರು. ಅಲ್ಲಿ ಶ್ರೀ ರಾಮಕೃಷ್ಣರು ವಿವೇಕಾನಂದರ ಮೇಲೆ ತಮ್ಮ ಕಾಲನ್ನು ಹಾಕಿದ ಕೂಡಲೇ ಜಗತ್ತೇ ಅವರಿಗೆ ಇಲ್ಲವಾಯಿತು. ಅಲ್ಲಿಂದ ಹೊರಗೆ ಬರಲು ಎಷ್ಟೋ ಕಷ್ಟವಾಯಿತು.

ಹಾಗಾದರೆ ಶ್ರೀ ಗುರುಗಳು ಯಾರು? ಶ್ರೋತ್ರೀಯ ಬ್ರಹ್ಮನಿಷ್ಠರೇ ಶ್ರೀ ಗುರು. ಇದನ್ನು ಮುಂಡಕ ಉಪನಿಷತ್ತು.

**"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗ್ಛೇತ್**

**ಸಮಿತ್ಪಾಣಿಃ ಶ್ರೋತ್ರೀಯಮ್ ಬ್ರಹ್ಮನಿಷ್ಟಮ್"**

---

**"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ"**
ಹುಟ್ಟಿದವನಿಗೆ ಸಾವು ನಿಶ್ಚಯ, ಸತ್ತವನಿಗೆ ಮತ್ತೆ ಹುಟ್ಟುವುದು ನಿಶ್ಚಯ
(ಗೀತೆ 2–23)

ಎಂದು ಶ್ರೀ ಗುರುವಿನ ಲಕ್ಷಣವನ್ನು ಹೇಳುತ್ತದೆ. ತತ್‌ಪದ ಲಕ್ಷ್ಯಾರ್ಥವಾದ ಪರಬ್ರಹ್ಮವೇ ನಾನೆಂದು, ಬ್ರಹ್ಮ ಸ್ವರೂಪವನ್ನು ವಿಚಾರ ಮಾಡಬೇಕಾದರೆ **'ಸ'** ಅವನು ಗುರುವನ್ನೇ ಹೊಂದಬೇಕು.

**ಪ್ರ. : ಶ್ರೀ ಗುರುವನ್ನು ಹೇಗೆ ಹೋಗಿ ಸೇರಬೇಕು?**

**ಉ.:** ಒಂದೊಂದು ಸ್ಥಳಕ್ಕೆ ಹೋಗಬೇಕಾದರೆ ಒಂದೊಂದು ವಿಧಿ ವಿಧಾನಗಳನ್ನು ಅನುಸರಿಸಬೇಕು. ಅದರಂತೆ ಗುರುವಿನ ಬಳಿಗೆ ಹೋಗಬೇಕಾದರೆ ಯಾವ ಯಾವ ವಿಧಿವಿಧಾನಗಳನ್ನು ಅನುಸರಿಸಬೇಕು?

ಸಿನಿಮಾ ಥೇಟರಿಗೆ ಟಿಕೆಟು ಕೊಂಡು ನುಗ್ಗಿದಂತೆ ನುಗ್ಗಬಾರದು. **'ಸಮಿತ್ಪಾಣಿಃ'** ಕೈಯಲ್ಲಿ ಅರಳೀ ಮರದ ತುಂಡುಗಳನ್ನು ಯಜ್ಞಯಾಗಾದಿಗಳಿಗೆ ಬರುತ್ತವೆ. ಅವುಗಳನ್ನು ತೆಗೆದುಕೊಂಡು ಹೋಗಬೇಕು. ತೆಗೆದುಕೊಂಡು ಹೋಗಿ ಅವರ ಮುಂದೆ ಇಡಬೇಕು.

**ಪ್ರ.: ಶ್ರೀ ಗುರುವಿಗೆ ಸೌದೆ ಇಲ್ಲವೊ?**

**ಉ. :** ಕಟ್ಟಿಗೆಯು ಅಗ್ನಿಗೆ ವಿಷಯ. ಅಗ್ನಿಗೆ ವಿರೋಧವಾದ ಕಟ್ಟಿಗೆ ಎಂದರೆ ಇಲ್ಲಿಯವರೆಗೆ ಯಾವ ಯಾವ ವಿಷಯವನ್ನು ಭೋಗಿಸುತ್ತಿದ್ದೆವೋ ಅವೆಲ್ಲವನ್ನು ಶ್ರೀ ಗುರುಗಳಿಗೆ ಅರ್ಪಿಸುವುದು. ಇಲ್ಲಿಯವರೆಗೆ ತಿಳಿಯದೆ ಭೋಗಿಸಿದೆವು. ಈ ಎಲ್ಲಾ ವಿಷಯಗಳು ನಮ್ಮವಲ್ಲ. ಅವೆಲ್ಲಾ ನಿಮ್ಮ ವಿಷಯಗಳೆಂದು ಅರ್ಪಿಸಬೇಕು.

ಮತ್ತೊಂದು ವಿಶೇಷ. ಒಣ ಸೌದೆಯು ನಿಸ್ಸಾರವಾದ ಪದಾರ್ಥ. ಅವನ್ನು ನಿಸ್ಸಾರವೆಂದು ತಿಳಿದು ಈ ಜಗತ್ತಿನ ಸರ್ವ ಪದಾರ್ಥಗಳು ನಿಸ್ಸಾರವಾದವೆಂದು ತಿಳಿದು ಶ್ರೀಗುರುವಿಗೆ ಅರ್ಪಿಸಬೇಕು.

ನಾವು ಅರ್ಪಿಸುವ ಸರ್ವ ಪದಾರ್ಥಗಳು ಮಾಯೋಪಾಧಿಕ ಈಶ್ವರನ ವಸ್ತುಗಳು. ಇಲ್ಲಿಯವರೆಗೆ ಅವೆಲ್ಲಾ ನನ್ನವೆಂದು ಮುದ್ರೆ ಹಾಕಿ ಇಟ್ಟುಕೊಂಡಿದ್ದೆವು. ಈಗ ಯಾವೂ ನಮ್ಮವಲ್ಲ. ಅವೆಲ್ಲಾ ಈಶ್ವರನ ವಸ್ತುಗಳೆಂದು ತಿಳಿಯುವುದೇ ಒಣ ಸೌದೆ ಅರ್ಪಿಸುವ ಚಿಹ್ನೆ.

ಮತ್ತೊಂದು ವಿಷಯ – ಆ ಒಣ ಸೌದೆ ಅರ್ಪಿಸುವ ಅರ್ಥವೇನೆಂದರೆ ವೈರಾಗ್ಯ ಹುಟ್ಟಿದೆ ಎಂದು ತೋರಿಸುವ ಚಿಹ್ನೆ. ಇದು ಶಿಷ್ಯನ ಯೋಗ್ಯತೆಯ ಪರೀಕ್ಷೆ.

**ಪ್ರ.: ಹಾಗಾದರೆ ಶ್ರೀ ಗುರು ಹೇಗಿರಬೇಕು?**

**ಉ.:** ಶ್ರೀರಾಮನು 14 ವರ್ಷದ ನಂತರ ಅಯೋಧ್ಯೆಗೆ ಬಂದ. ಪಟ್ಟಾಭಿಷಕ್ತನಾದ ಶುಭ ಸಂದರ್ಭದಲ್ಲಿ ಎಲ್ಲಾ ಪ್ರಜೆಗಳಿಗೂ ಉಟ ಹಾಕಿಸಲೆಂದು ಶ್ರೀರಾಮನು ಸರ್ವ

"ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನಃ"
ಕರ್ಮ ಮಾಡುವುದರಲ್ಲಿಯೇ ನಿನಗೆ ಅಧಿಕಾರ ಇದೆ.
ಆದರೆ ಕರ್ಮಫಲದಲ್ಲಿ ಯಾವಾಗಲೂ ಅಧಿಕರವಿಲ್ಲ (ಗೀತೆ 2–43)



ಪ್ರಜೆಗಳಿಗೂ ಮೃಷ್ಟಾನ್ನ ಭೋಜನ ಮಾಡಿಸಿದನು. ಎಲ್ಲರೂ ಬಂದು ಊಟ ಮಾಡಿಕೊಂಡು ಹೋಗುತ್ತಿದ್ದರು. ಎಲ್ಲರೂ ಎಲ್ಲಾ ಪ್ರಾಣಿಗಳೂ ತೃಪ್ತಿಯಾಗಿ ಊಟ ಮಾಡಿದರೆ? ಎಂದನು ಶ್ರೀರಾಮ, ಆಗ ಆಳುಗಳು ಸ್ವಾಮಿ ಎಲ್ಲಾ ಊಟ ಮಾಡಿದರು, ಆದರೆ ಒಂದು ಚರಂಡಿಯಲ್ಲಿ ಬಿದ್ದು ಮೈಯೆಲ್ಲಾ ಗಾಯವಾಗಿ ನೊಣ ಹುಳುಗಳಿಂದ ಸಂಕಟ ಪಡುತ್ತಿರುವ ಒಂದು ನಾಯಿ ಮಾತ್ರ ಬಂದು ಊಟ ಮಾಡಿಲ್ಲ ಎಂದರು. ಆಗ ಶ್ರೀರಾಮಚಂದ್ರನು ನಕ್ಕು ಅದನ್ನು ಎತ್ತಿಕೊಂಡು ಬಂದು ಊಟ ಮಾಡಿಸಿರಿ ಎಂದ. ಶ್ರೀರಾಮನು ನಕ್ಕುದುದರ ಅರ್ಥವನ್ನು ವಶಿಷ್ಠರು ಕೇಳುತ್ತಾರೆ. ಆಗ ಶ್ರೀರಾಮನು ಹೀಗೆ ಹೇಳುತ್ತಾನೆ. ಆ ನಾಯಿ ಹಿಂದಿನ ಜನ್ಮದಲ್ಲಿ ಗುರು ಆಗಿತ್ತು. ಭಕ್ತರಿಂದ ಮೃಷ್ಟಾನ್ನ ಭೋಜನ ತರಿಸಿಕೊಂಡು ತಿನ್ನುತ್ತಿದ್ದಿತು. ಈಗ ಆ ಗುರುವೇ ನಾಯಿಯಾಗಿ ರೋಗದಿಂದ ನರಳುತ್ತಿದೆ. ಶಿಷ್ಯರೆಲ್ಲರೂ ಹುಳುಗಳಾಗಿ ಆ ಗುರು ಆಗಿರುವ ನಾಯಿಯ ರಕ್ತ ಮಾಂಸವನ್ನು ತಿನ್ನುತ್ತಿದ್ದಾರೆ. ಆದ್ದರಿಂದ ಗುರುವಾಗುವುದು ಅದು ಅಷ್ಟು ಸುಲಭವಲ್ಲ. ಯೋಗ್ಯತೆ ಸಂಪಾದಿಸಿ ಗುರು ಆಗು. ನಾವು ಬಳಸುವ ಸರ್ವಪದಾರ್ಥಗಳು ಮಾಯೋಪಾಧಿಕ ಈಶ್ವರನವು. ಅವೆಲ್ಲವನ್ನೂ ನನ್ನವೆಂದು ಮುದ್ರೆ ಒತ್ತಿ ಉಪಯೋಗಿಸಿದ್ದೇವಲ್ಲ ಅದನ್ನು ಬಿಡಬೇಕು. ಇದೇ **"ಸಮಿತ್ಪಾಣಿ"** ಎಂಬ ಪದಕ್ಕೆ ಅರ್ಥ. ಇದು ವೈರಾಗ್ಯದ ಚಿಹ್ನೆ. ಹೀಗೆ ಶಿಷ್ಯನಿಗೆ ವೈರಾಗ್ಯ ಹುಟ್ಟಬೇಕು.

**ಪ್ರ.: ಹಾಗಾದರೆ ಗುರು ಹೇಗಿರಬೇಕು?**

**ಉ.:** ಈಗ ಕೆಲವು ಜನ ಗುರುಗಳು ಸ್ವೇಚ್ಛಾಚಾರಿಗಳಾಗಿರುತ್ತಾರೆ. ಅವರಲ್ಲಿ ನ್ಯಾಯವೂ ಇಲ್ಲ, ನೀತಿಯೂ ಇಲ್ಲ, ಧರ್ಮವೂ ಇಲ್ಲ. ಇದನ್ನು ಸರ್ಪಭೂಷಣ ಶಿವಯೋಗಿಗಳು ತಮ್ಮ ಜ್ಞಾನ ಶತಕದಲ್ಲಿ (4ನೇ ವೃತ್ತ)

**ಗೀತಾದಿ ಮೋಹನ ಕಲಾ ಜಠರಾವನಾಯಾ ।**
**ತರ್ಕಾದಿ ಧೋರಣ ಕಲಾ ಜನಗೌರವಾಯಾ ।**
**ವೇದಾದಿ ಪಾವನಕಲಾ ಪರಭಾವುಕಾಯಾ ।**
**ತತ್ತ್ವಾ ಓದನಕಲಾ ಭವತೇಽಮೃತಾಯಾ ॥**

ಜನರನ್ನು ಮೋಹಪರವಶರನ್ನಾಗಿ ಮಾಡುವ ಸಂಗೀತಾದಿ ವಿದ್ಯೆಗಳು ಹೊಟ್ಟೆ ಹೊರೆಯುವುದಕ್ಕಾಗಿ ಇಟ್ಟುಕೋ, ತರ್ಕಾದಿ ವಿದ್ಯೆಯು ಜನರಲ್ಲಿ ಗೌರವ ಸಂಪಾದಿಸುವುದಕ್ಕಾಗಿ ಇಟ್ಟುಕೋ. ಪವಿತ್ರವಾದ ವೇದವಿದ್ಯೆಯು ಪರಲೋಕ ಸುಖ ಸಾಧನಕ್ಕಾಗಿ ಇಟ್ಟುಕೋ. ಆದರೆ ಬ್ರಹ್ಮಸ್ವರೂಪವನ್ನು ಯಥಾರ್ಥವಾಗಿ ಅರಿಯುವ ಬ್ರಹ್ಮವಿದ್ಯೆಯು ಮುಕ್ತಿಗಾಗಿಯೇ ಇದೆ. ಆದ್ದರಿಂದ ಸರ್ವ ವಿದ್ಯೆಗಳಿಗಿಂತಲೂ ಬ್ರಹ್ಮವಿದ್ಯೆಯು ಸರ್ವಶ್ರೇಷ್ಠವಾದುದು.

"ಯೋಗ ಕರ್ಮಸು ಕೌಶಲಮ್"
ಕುಶಲತೆಯಿಂದ ಕರ್ಮ ಮಾಡಿದರೆ ಅದೇ ಕರ್ಮವು ಯೋಗವಾಗುತ್ತದೆ
(ಗೀತೆ 2–50)

**ಪ್ರ. : ಹಾಗಾದರೆ ಆ ಸರ್ವ ಶ್ರೇಷ್ಠವಾದ ಬ್ರಹ್ಮವಿದ್ಯೆಯನ್ನೇ ಬ್ರಹ್ಮವೇ ನಿನ್ನ ಸ್ವರೂಪವೆಂದು ಬೋಧಿಸುವ ಗುರು ಹೇಗಿರಬೇಕು?**

**ಉ.:** ಇದನ್ನು ಭಗವದ್ಗೀತೆಯು

**ತದ್ವಿದ್ಧಿಪ್ರಣಿ ಪಾತೇನ ಪರಿಪ್ರಶ್ನೇನ ಸೇವಯಾ ।**

**ಉಪದೇಕ್ಷ್ಯಂತಿ ತೇ ಜ್ಞಾನಿನಸ್ತತ್ತ್ವದರ್ಶನಃ ॥ 4 ॥ 34 ॥**

ಆ ಜ್ಞಾನವನ್ನು ಬೋಧಿಸುವ ಗುರುಗಳು ತತ್ತ್ವವೇತ್ತರಾಗಿರಬೇಕು ಎಂದರೆ ತಾನು ಬ್ರಹ್ಮಸ್ವರೂಪನಾಗಿದ್ದು ಬ್ರಹ್ಮವನ್ನು ಬೋಧಿಸುವವನಾಗಿರಬೇಕು. ಅವರನ್ನು ಪ್ರಣಿಪಾತ ಅಂದರೆ ದೀರ್ಘದಂಡನಮಸ್ಕಾರದಿಂದಲೂ, ಮತ್ತು ಮೃದುವಾದ ಪ್ರಶ್ನೆಗಳಿಂದಲೂ, ಅವರನ್ನು ಸೇವೆಯಿಂದಲೂ ಅವರನ್ನು ಗುರುವೆಂದು ಮನ್ನಿಸಬೇಕು. ಅವರು ಎರಡು ಲಕ್ಷಣಗಳುಳ್ಳವರಾಗಿರಬೇಕು.

1) ಅವರು ತಾನು ಬ್ರಹ್ಮವನ್ನು ತಿಳಿದು, 2) ತತ್ತ್ವದರ್ಶಿಗಳೂ ಅಂದರೆ ಬ್ರಹ್ಮವನ್ನು ಅಪರೋಕ್ಷವಾಗಿ ನೋಡಿರಬೇಕೆಂದು ಗೀತೆಯು ಹೇಳುತ್ತದೆ. ಅವರು ಶ್ರೋತ್ರಿಯತ್ತ್ವ ಬ್ರಹ್ಮನಿಷ್ಠತ್ವ ಎರಡೂ ಅವರಲ್ಲಿರಬೇಕು. ಆ ಎರಡೂ ಲಕ್ಷಣಗಳಿರುವವನೇ ನಿಜವಾದ ಗುರು.

**ಪ್ರ.: ಹಾಗಾದರೆ ಶ್ರೀಮನ್ನಿಜಗುಣರು ಗುರು ಲಕ್ಷಣ ಹೇಗೆ ಹೇಳುತ್ತಾರೆ?**

**ಉ.:** ಶ್ರೀ ನಿಜಗುಣರು ತಮ್ಮ ಅನುಭವಸಾರ ಗ್ರಂಥದಲ್ಲಿ ಗುರುವಿನ ಲಕ್ಷಣ ಹೀಗೆ ಹೇಳುತ್ತಾರೆ –

**ಕರುಣ ಸತ್ಕಲೆ ಶಾಸ್ತ್ರ ಪರಿಣತೆ ನಿರಾಶೆ ಸೌಂ ।**
**ದರತೆ ಸುಮುಖತ್ವ ಸುಗುಣ ಸುಜ್ಞಾನಂಗ ।**
**ಳಿರಲವನೇ ಸೇವ್ಯ ಗುರುವಕ್ಕು ॥ ಅನುಭವಸಾರ ॥**

ಈ ರೀತಿ ಗುರುವಿಗೆ ಎಂಟು ಗುಣಗಳಿರಬೇಕಂತೆ 1) **ಕರುಣೆ** ಅಂದರೆ ದಯೆಯಿರಬೇಕು. ಗುರುವಿನ ಮುಖವನ್ನು ನೋಡಿದ ಕೂಡಲೇ ಶಿಷ್ಯನ ಮುಖ ಅರಳಬೇಕು. ಈ ಕರುಣೆಯು ಪರಮಾತ್ಮನ ಸಂಪತ್ತು. ಗುರುವು ಕಠೋರವಾಗಿರಬಾರದು. ಕರುಣೆಯಿಂದ ಎಲ್ಲರ ಮೇಲೆಯೂ ಸಮದೃಷ್ಟಿಯಿಂದ ಇರಬೇಕು. ಎಲ್ಲರೂ ಬ್ರಹ್ಮಾನಂದವನ್ನು ಅನುಭವಿಸಲಿ ಎಂಬ ವಿಶಾಲ ಭಾವನೆ ಇರಬೇಕು.

**2) ಸತ್ಕಲೆ** – ನಾನೇ ಪರಬ್ರಹ್ಮವೆಂಬುದೇ ನಿಜವಾದ ಕಲೆ. ಆ ಕಲೆ ಸಂಪಾದನೆ ಮಾಡಿಕೊಂಡಿರಬೇಕು.

**3) ಶಾಸ್ತ್ರಪರಿಣತೆ** – ಶಾಸ್ತ್ರ ಹೇಳುವಾಗ ಕೇಳುವ ಶ್ರೋತೃಗಳಿಗೆ ರುಚಿಕರವಾಗಿರುವಂತೆ

---

**"ತತ್ಪರಂ ಪುರುಷ ಖ್ಯಾತೇ ಗುಣವೈ ತೃಷ್ಣಮ್"**

ಈ ದೇಹ ಇಂದ್ರಿಯಗಳು, ಮನಸ್ಸು, ಅಂತಃಕರಣ ಇವು ನಾನಲ್ಲ, ನನ್ನವೂ ಅಲ್ಲ. ನಾನು ಇವುಗಳಿಂದ ಬೇರೆ ಎಂಬ ವಿವೇಕ ಉಂಟಾಗಬೇಕು. (ಯೋಗ ದರ್ಶನ)



ಹೇಳಬೇಕು. ಹೆಣ್ಣು ಮಕ್ಕಳು ರುಚಿರುಚಿಯಾಗಿ ಅಡುಗೆ ಮಾಡಿ ಊಟ ಮಾಡುವವರಿಗೆ ಸಂತೋಷವಾಗುವಂತೆ ಬಡಿಸುವಂತೆ ಗುರುಗಳೂ ಸಹ ಕೇಳುವವರಿಗೆ ರುಚಿಯಾಗಿರುವಂತೆ ಹೇಳಬೇಕು. ಶಾಸ್ತ್ರ ಸಂಬಂಧವಾದ ತೊಡಕನ್ನು ಕೂಡಲೇ ಬಿಡಿಸಿ ಹೇಳುವ ಸಾಮರ್ಥ್ಯವಿರಬೇಕು. ಶ್ರೀ ಸಿದ್ಧಾರೂಢಸ್ವಾಮಿಗಳು, ರಮಣ ಮಹರ್ಷಿಗಳು ಇತ್ಯಾದಿ ಮಹನೀಯರು ತಾವು ಹೇಳುವಾಗಲೇ ಸಂದೇಹಕ್ಕೆ ಅವಕಾಶವಿಲ್ಲದೆ ಹೇಳುತ್ತಿದ್ದರು. ಅದು ಒಂದು ಉತ್ತಮವಾದ ಕಲೆ. ತಪ್ಪು ತಿಳುವಳಿಕೆಯನ್ನು ಬಿಡಿಸಬೇಕು. **"ವಕ್ತೃರೇವಹಿ ತಜ್ಜಾಡ್ಯಂ ಶ್ರೋತ್ರಾಯತ್ರನ ಬದ್ಧ್ಯತೇ"** ಎಲ್ಲಿ ಕೇಳುವವನಿಗೆ ಅರ್ಥವಾಗು–ವುದಿಲ್ಲವೋ ಅದು ಹೇಳುವವನ ದೋಷ. ಹೀಗೆ ಯಾವ ಸಂದೇಹ ಬಂದರೂ ಶಾಸ್ತ್ರ ಪರಿಣತೆಯಿಂದ ಬಿಡಿಸಬೇಕು. ಇದು ಒಂದು ವೇದಾಂತ ಹೇಳುವ ಕಲೆ.

**ಉದಾ.:** ದಮಯಂತಿ ಬಹಳ ಸುಂದರವಾದ ಕನ್ಯೆ. ಅವಳನ್ನು ಲಗ್ನವಾಗಲು ದೇವತೆಗಳು ಮಾರುವೇಷದಲ್ಲಿ ನಳನಂತೆ ವೇಷಧರಿಸಿ ಬಂದಿದ್ದರು. ನಳ ನಿಷಧ ದೇಶಾಧಿಪತಿಯಾದ ವೀರಸೇನ ರಾಜನ ಮಗ. ದಮಯಂತಿಯಾದರೋ ವಿದರ್ಭ ದೇಶದ ಭೀಮರಾಜನ ಮಗಳು. ಇವರಿಬ್ಬರೂ ಸುಂದರವಂತರು. ಇವರ ಚೆಲುವನ್ನು ಒಂದು ಹಂಸ ಪಕ್ಷಿ ನೋಡಿ ಇವರಿಬ್ಬರೂ ಅನುರೂಪವಾಗಿದ್ದಾರೆ. ಇವರಿಬ್ಬರಿಗೂ ವಿವಾಹ ಮಾಡಲು ಸಂಕಲ್ಪಿಸಿತು. ವಿವಾಹವಾಗಲು ದೇವತೆಗಳು ಬಂದು ನಳನಂತೆಯೇ ಕುಳಿತಿದ್ದಾರೆ. ಆಗ ದಮಯಂತಿ ಇಷ್ಟು ಜನ ನಳ ವೇಷಧಾರಿಗಳಲ್ಲಿ ನಿಜವಾದ ನಳ ಯಾರು? ಎಂದು ಭಗವಂತನಲ್ಲಿ ಪ್ರಾರ್ಥಿಸಿದಳು. ಆಗ ಆಕೆಗೆ ಭಗವಂತನ ಅನುಗ್ರಹದಿಂದ ಒಂದು ವಿಷಯ ಹೊಳೆಯಿತು. 1) ದೇವತೆಗಳು ಕಣ್ಣು ಮಿಳುಕುಸುವುದಿಲ್ಲ, 2) ಅವರ ಪಾದಗಳು ಭೂಮಿಯನ್ನು ಮುಟ್ಟುವುದಿಲ್ಲ, 3) ಅವರ ನೆರಳು ಭೂಮಿಯ ಮೇಲೆ ಬೀಳುವುದಿಲ್ಲ, 4) ಚಾಕು ಚುಚ್ಚಿದರೆ ಒಳಗೆ ಹೋಗುವುದಿಲ್ಲ, 5) ಹಾಕಿದ ಹಾರ ಬಾಡುವುದಿಲ್ಲ. ಹೀಗೆ ಮಾಡಿ ನಿಜವಾದ ನಳನನ್ನು ಗುರುತಿಸಿ ವಿವಾಹವಾದಳು.

ಇದೇ ಶಾಸ್ತ್ರ ಪರಿಣತೆ, ಶ್ರೀ ಗುರುಗಳು ಇಂತಹ ಶಾಸ್ತ್ರ ಪರಿಣತರೆ ಆಗಿರಬೇಕು. ಶಾಸ್ತ್ರದ ಕಲೆಯನ್ನು ಚೆನ್ನಾಗಿ ಬಲ್ಲವರಾಗಿರಬೇಕು. ಅಕ್ಷರಕ್ಕೆ ಗಂಟೆಗಟ್ಟಲೆ ಉಪನ್ಯಾಸ ಮಾಡುವುದಲ್ಲ. ಲಕ್ಷ್ಯಾರ್ಥವನ್ನು ಬಲ್ಲವನಾಗಿರಬೇಕು.

**4) ನಿರಾಶೆ:** ಪ್ರಾಪಂಚಿಕ ಪದಾರ್ಥಗಳಲ್ಲಿ ಎಳ್ಳಷ್ಟೂ ಆಸೆಯಿರಬಾರದು. ಆ ಪ್ರಾಪಂಚಿಕ ವಸ್ತುಗಳು ಮಿಥ್ಯಾವಸ್ತುಗಳೆಂಬ ದೃಢವಾದ ಭಾವವಿರಬೇಕು. ಇಂಥವರೆ ನಿಜವಾದ ಗುರುಗಳೆಂಬ ದೃಢವಾದ ಭಾವವಿರಬೇಕು. ಇಂಥವರೆ ನಿಜವಾದ ಗುರುಗಳೆಂದು ನಿಜಗುಣರು ಹೇಳಿದ್ದಾರೆ.

---

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**

ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು ಮನಸ್ಸಿಗೆ ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೇ ಪರಮಾತ್ಮ (ಕೇನ.ಉ.)

ಮತ್ತು ಪರಮಾನುಭವ ಬೋಧೆಯ ಆರಂಭದಲ್ಲಿ ಮಂಗಳಾಚರಣೆ ಮಾಡಿದ್ದಾರೆ. ಅದನ್ನು ನೋಡಿರಿ –

**ಕರುಣ ರಸದ ಕೋಡಿವರಿವ ಕಟಾಕ್ಷದ ಪರತತ್ವವರು**

**ಪುವಾಲಾಪದ ವರಪುಣ್ಯಮಯ ಶರೀರದ ನಿರಾಭಾರಿ ಸದ್ಗುರುವಿರಲೆನ್ನ ಮಾನಸದಲ್ಲಿ**

ಎಂದು ಶ್ರೀ ಗುರುವನ್ನು ಹಾಡಿ ಹೊಗಳಿದ್ದಾರೆ.

ಕರುಣರಸದ ಕೋಡಿವರಿವ ಕಟಾಕ್ಷದ – ಕಣ್ಣಿನಿಂದ ದುಃಖದ ನೀರು–ಸುಖದ ನೀರು ಬರುತ್ತದೆ. ಸುಖದ ನೀರು ಕಣ್ಣಿನ ಕೊನೆಯಿಂದ ಬಂದರೆ ದುಃಖದ ನೀರು ಮೂಗಿನ ಸಮೀಪದ ಕಣ್ಣಿನಿಂದ ಬರುತ್ತವೆ. ಹೀಗೆ ಶಿಷ್ಯರನ್ನು ನೋಡಿ ಕಣ್ಣಿನ ಕೊನೆಯಿಂದ ನೀರು ಬರುತ್ತದೆಯೋ ಅವನೇ ಗುರು. ಅವರ ಕಣ್ಣಿನಲ್ಲಿ ಕಣ್ಣಿನ ನೋಟದಲ್ಲಿ ಮಹಾಶಕ್ತಿಯಿರುತ್ತದೆ. ಕರುಣರಸದ ಕೋಡಿವರಿದ ಕಟಾಕ್ಷದ ಎಂಬುದಕ್ಕೆ ಬ್ರಹ್ಮನಿಷ್ಠನೆಂದು ಅರ್ಥ ಮಾಡಬೇಕು.

**ಪರತತ್ತ್ವವರಿವ ಆಲಾಪದ – ಮನಸ್ಸೆಂಬ ಸರ್ಪವನ್ನು ಆಡಿಸಿ ಆನಂದಪಡುತ್ತಾರೆ.**

**ನಿರಾಭಾರಿ ಸದ್ಗುರುವಿರಲೆನ್ನ ಮಾನಸದೊಳು** – ಗುರುವು ಯಾರಿಗೂ ಭಾರವಾಗಿರಬಾರದು. ಮತ್ತೊಬ್ಬರ ಭಾರ ಇಳಿಸುವವನೇ ಗುರು. ಮತ್ತೊಬ್ಬರಿಗೆ ಭಾರ ಹಾಕುವವನು ಗುರುವಲ್ಲ. ಶ್ರೋತ್ರೀಯ ಬ್ರಹ್ಮನಿಷ್ಠವೇ ಸದ್ಗುರು.

**"ಓಂ ತತ್ಸತ್"**

## ಸಂಜಯನು ಭಾರತದ ಯುದ್ಧದ ಬಗ್ಗೆ

– ಶ್ರೀಮತಿ ಮಾತಾ ನಾಗರತ್ನಮ್ಮ, ಬೆಂಗಳೂರು

ಸಂಜಯನು ವ್ಯಾಸ ಭಗವಂತನ ಶಿಷ್ಯ. ಸಂ–ಎಂದರೆ ಸಮಸ್ತ ಇಂದ್ರಿಯಗಳನ್ನು ಜಯಿಸಿ ವ್ಯಾಸಭಗವಂತನ ಅನುಗ್ರಹದಿಂದ ದೂರದಶ್ರವಣ– ದೂರದ ನೋಟವನ್ನು ಪಡೆದುಕೊಂಡವನೇ ಸಂಜಯ. ಇವನು ಮಹಾತ್ಮ – ಪರಮಾತ್ಮನಾದ ಶ್ರೀಕೃಷ್ಣನು ಅರ್ಜುನನಿಗೆ ಗೀತೆಯನ್ನು ಬೋಧಿಸಿದರೆ ಮಹಾತ್ಮನಾದ ಸಂಜಯನು ಧೃತರಾಷ್ಟ್ರನಿಗೆ ಭಗವದ್ಗೀತೆಯನ್ನು ಬೋಧಿಸಿದ. ಧೃತರಾಷ್ಟ್ರನಿಗೆ ಅದು ಯಾವ ಪ್ರಯೋಜನವೂ ಆಗಲಿಲ್ಲ. ಮ್ಯಾಗ್ನೆಟ್ ಎಷ್ಟು ಶಕ್ತಿ ಉಳ್ಳದ್ದಾಗಿದ್ದರೂ ತುಕ್ಕು ಹಿಡಿದು ಮಣ್ಣಾಗಿರುವ ಕಬ್ಬಿಣವನ್ನು ಆಕರ್ಷಿಸಲಾರದು. ಹಾಗೆ ಸಂಜಯ ಮಹಾತ್ಮನಾದರೂ ಅವನ ಬೋಧೆ ಧೃತರಾಷ್ಟ್ರನಲ್ಲಿ ಯಾವ ಪ್ರಯೋಜನವನ್ನು ಉಂಟು ಮಾಡಲಾರದೆ ಹೋಯಿತು. ಇರಲಿ.

ಸಂಜಯನ ಮಾತಿನಲ್ಲಿ ಕುರುಕ್ಷೇತ್ರ ಯುದ್ಧವನ್ನು ಕೇಳಿ ತಿಳಿದುಕೊಳ್ಳಿರಿ – ಯುದ್ಧವು

**"ಸಹನಂ ಸರ್ವ ದುಃಖಾನಾಂ ಅಪ್ರತಿಕಾರ ಪೂರ್ವಕಂ ಚಿಂತಾ ವಿಲಾಪ ರಹಿತಂ ಸಾ ತಿತಕ್ಷಾನಿಗದ್ಯತೇ"**–ಯಾರು ಬರುವ ದುಃಖಗಳನ್ನು ಪ್ರತೀಕಾರ ಮಾಡದೆ ಸಹಿಸುತ್ತಾರೆಯೋ ಮತ್ತು ಚಿಂತೆ ಮಾಡದೆ ಸಹಿಸುತ್ತಾರೋ ಅದೇ ತಿತೀಕ್ಷೆ (ವಿವೇಕ ಚೂಡಾಮಣಿ)



ಬೇಡವೆಂದು ಬಹಳ ಜನ ಹೇಳಿದರೂ ದುರ್ಯೋಧನನು ಕೇಳಲಿಲ್ಲ. ಧರ್ಮರಾಜನು ಯುದ್ಧವೇ ಬೇಡವೆಂದು ಪಟ್ಟು ಹಿಡಿದಿದ್ದನು. ಬಹಳ ಜನ ಯುದ್ಧ ಆಗಿಯೇ ತೀರಬೇಕೆಂದು ಪ್ರೇರೇಪಿಸುತ್ತಿದ್ದರು. ಕೊನೆಗೆ ಅವನು ಯುದ್ಧಕ್ಕೆ ಸಿದ್ಧನಾದನು. ಯುದ್ಧ ಬೇಡವೆಂದು ಶ್ರೀಕೃಷ್ಣನು ಧೃತರಾಷ್ಟ್ರನಲ್ಲಿ ಸಂಧಿಗಾಗಿ ಬಂದರೂ ಪ್ರಯೋಜನವಾಗಲಿಲ್ಲ. ಆದರೆ ಯುದ್ಧ ಆಗಿಯೇಬಿಟ್ಟಿತು. ಅದರಿಂದ ಮಹತ್ತಾದ ಉಪಕಾರ ಹಿತಬೋಧೆ. ಯುದ್ಧ ಬೇಡವೆಂದು ಕೌರವನಿಗೆ ಬೋಧಿಸಿದವರು ಅವನ ಪಕ್ಷದಿಂದಲೇ ಯುದ್ಧಕ್ಕೆ ತಯಾರಾಗಿ ಎಂದರು. ಅಣ್ಣ ತಮ್ಮಂದಿರ ಮಕ್ಕಳೇ ಮುಖ್ಯವಾಗಿ ಪರಸ್ಪರ ಹೋರಾಡ ಹೊರಟರೆ ಅವರಿವರ ಬಂಧುಗಳೂ, ಸ್ನೇಹಿತರೂ ಅವರಲ್ಲಿ ಕೂಡಿಕೊಳ್ಳುವುದು ಆಶ್ಚರ್ಯವೇನಲ್ಲ.

ಹೀಗೆ ಕೌರವರ ಪಕ್ಷದಲ್ಲಿ ಹನ್ನೊಂದು ಅಕ್ಷೋಹಿಣಿ–ಪಾಂಡವರ ಪಕ್ಷದಲ್ಲಿ ಆ ಏಳು ಅಕ್ಷೋಹಿಣಿ ಸೇವಾಬಲಗಳು ಕೂಡಿದ್ದವು. ಧ್ರುಪದನ ಪುತ್ರನಾದ ಧೃಷ್ಟದ್ಯುಮ್ನನೇ ಪಾಂಡವರ ಸೇನಾನಾಯಕ. ಉಭಯಕುಲ ತಿಲಕ ಪಿತಾಮಹ ಭೀಷ್ಮಾಚಾರ್ಯರೇ ಕೌರವರ ಮೊದಲ ಸೇನಾಪತಿ. ಯುದ್ಧದಲ್ಲಿ ಪ್ರಾಮಾಣಿಕವಾಗಿ ಯುದ್ಧ ಮಾಡಬೇಕೆಂದು ಉಭಯ ಬಲತಿಲಕರು ತೀರ್ಮಾನಿಸಿದ್ದರೂ ಪ್ರಾಮಾಣಿಕತೆಯು ಹಾರಿಹೋಯಿತು. ಮೋಸಗಾರಿಕೆಯೇ ಮೇಲೆ ಬಂದಿತು.

ಯುದ್ಧವು ಪ್ರಾರಂಭವಾಯಿತು. ಒಂದೇ ಸಮನೆ ಹೋರಾಟವು ಭಯಂಕರವಾಗಿ ಸಾಗಿತ್ತು. ಒಂಭತ್ತು ದಿವಸ ಯುದ್ಧ ಸಾಗಿತು. ಎರಡೂ ಕಡೆಯವರು ಸಾಕಷ್ಟು ಸತ್ತು ಹೊದರು. ದುರ್ಯೋಧನನು ಭೀಷ್ಮಾಚಾರ್ಯರಲ್ಲಿ 9 ದಿವಸದಲ್ಲಿ ಯಾರೊಬ್ಬ ಪಾಂಡವರನ್ನು ಕೊಲ್ಲಲಿಲ್ಲವೆಂದು ಮೂದಲಿಸಿ ಅತ್ತು ಬಿಟ್ಟನು. ಆ ಅಳುವಿಗೆ ಮನ ಕರಗಿದ ಭೀಷ್ಮರು "ನಾಳೆ ಪಾಂಡವರು ಇಲ್ಲದಂತೆ ಮಾಡುತ್ತೇನೆಂದು" ಪ್ರತಿಜ್ಞೆ ಮಾಡಿದರು. ಆ ಪ್ರತಿಜ್ಞೆ ಎರಡೂ ಸೈನ್ಯದಲ್ಲಿ ಮೊಳಗಿತು. ಅದು ಭೀಷ್ಮ ಪ್ರತಿಜ್ಞೆ ಅವರ ಪ್ರತಿಜ್ಞೆಗೆ ತ್ರಿಮೂರ್ತಿಗಳಿಂದಲೂ ಅಡ್ಡಿ ಮಾಡಲು ಸಾಧ್ಯವಿಲ್ಲ.

ಕೃಷ್ಣೆ(ದ್ರೌಪದಿ) ಸುಖವಾಗಿ ಆರಾಮಾಗಿದ್ದಾಳೆ. ಪಾಂಡವರಾರಿಗೂ ಭಯವೇ ಇಲ್ಲ. ಶ್ರೀಕೃಷ್ಣನು ದ್ರೌಪದಿ ಹತ್ತಿರ ಬಂದ, ತಕ್ಷಣ ಎದ್ದು ನಮಸ್ಕರಿಸಿದಳು. ಏನಮ್ಮ ಭೀಷ್ಮ ಪ್ರತಿಜ್ಞೆ ಕೇಳಿದೆಯಾ– ಹೌದು ಕೇಳಿದೆ ಸುಮ್ಮನೆ ಇದ್ದೀಯಲ್ಲಮ್ಮ. ರಕ್ಷಕರು ಇರುವಾಗ ಭಿಕ್ಷುಕರಾದ ನಮಗೇಕೆ ಚಿಂತೆ ಎಂದಳು. "ಅಮ್ಮ ನನ್ನ ಜೊತೆಯಲ್ಲಿ ಬಾ" ಎಂದು ಶ್ರೀಕೃಷ್ಣನು ದ್ರೌಪದಿಯನ್ನು ಕರೆದುಕೊಂಡು ಭೀಷ್ಮನ ಹತ್ತಿರಕ್ಕೆ ಹೋದ. ಸಣ್ಣಗೆ ಮಳೆ ಬರುತ್ತಿದ್ದರೆ

**"ದೇಹಾತ್ಮ ಬುದ್ಧಿ ಜಂ ವಿದ್ಧಿ ನತದ್ಗೋವಧ ಕೋಟಿಭಿ ಬ್ರಹ್ಮಾತ್ಮ ಬುದ್ಧಿ ಜಂ ವಿದ್ಧಿ ನ ಭೂತೋ ನಭವಿಷ್ಯತೇ"** ಒಂದು ಸಾರಿ ನಾನು ದೇಹವೆಂದರೆ ಒಂದು ಕೋಟಿ ಗೋವುಗಳನ್ನು ಕೊಂದ ಪಾಪ ಬರುತ್ತದೆಒಂದು ಸಾರಿ ನಾನು ಬ್ರಹ್ಮವೆಂದರೆ ಹಿಂದೆ ಮಾಡಿದ ಮುಂದೆ ಮಾಡಲಿರುವ ಎಲ್ಲಾ ಪಾಪಗಳು ನಿವಾರಣೆಯಾಗುತ್ತವೆ.

ದ್ರೌಪದಿಯ ಪಾದರಕ್ಷಣೆಗಳನ್ನು ತನ್ನ ಪೀತಾಂಬರದಲ್ಲಿ ಸುತ್ತಿ ಬಗಲಲ್ಲಿ ಇಟ್ಟುಕೊಂಡಿದ್ದಾನೆ. ಇಬ್ಬರು ಹೋಗುತ್ತಿದ್ದಾರೆ. ಭೀಷ್ಮರ ಪಾಳಯಕ್ಕೆ ಹೆಣ್ಣು ಮಕ್ಕಳು ಯಾವ ಕಾಲದಲ್ಲಿಯಾದರೂ ಯಾರಾದರೂ ಆಗಲಿ ಹೋಗಿಬರಬಹುದಿತ್ತು. ದ್ರೌಪದಿಗೆ "ಅಮ್ಮಾ ನೀನು ಭೀಷ್ಮರ ಪಾದ ಹಿಡಿದುಕೊ ಆಶೀರ್ವಾದ ಮಾಡುವವರೆಗೂ ಬಿಡಬೇಡ" ಎಂದು ಹೇಳಿ ಕಳಿಸಿದನು. ದ್ರೌಪದಿಯು ನೇರವಾಗಿ ಹೋಗಿ ಆತ್ಮಾನುಸಂಧಾನದಲ್ಲಿದ್ದ ಭೀಷ್ಮರ ಪಾದಗಳಲ್ಲಿ ಭಕ್ತಿಯಿಂದ ನಮಸ್ಕರಿಸಿದಳು. ತಕ್ಷಣ ಭೀಷ್ಮನು ಕಣ್ಣು ತರೆದು ನೋಡಿ ಹೆಣ್ಣು ಮಗಳೆಂದು ತಿಳಿದು "ದೀರ್ಘಸುಮಂಗಲೀಭವ" ಎಂದು ಆಶೀರ್ವದಿಸಿದರು. ಮುಖ ಮೇಲೆ ಎತ್ತುತ್ತಾಳೆ ದ್ರೌಪದಿ, ಆಶ್ಚರ್ಯವಾಯಿತು, ಏನು ತಿಳಿಯದಂತಾಯಿತು ಭೀಷ್ಮರಿಗೆ. "ಅಮ್ಮಾ! ನಿನ್ನನ್ನು ಆ ಭಗವಂತನಾದ ಶ್ರೀಕೃಷ್ಣ ಪರಮಾತ್ಮನು ಕಳಿಸಿದ್ದಾನಲ್ಲವೆ! ಈಗ ಒಂದು ಗಂಟೆ ಹಿಂದೆ 'ನಿಷ್ಪಾಂಡವ ಪೃತ್ವಿ' ಎಂದು ಪ್ರತಿಜ್ಞೆ ಮಾಡಿದ ಭೀಷ್ಮಾಚಾರ್ಯರು ಈಗ ಅವರ ಸ್ಥಿತಿ ಏನಾಗಿರಬೇಕು! ದೀರ್ಘ ಸುಮಂಗಲಿ ಆಗಲೆಂದು ಅಶೀರ್ವದಿಸಿದ್ದಾರೆ. ಹೇ! ಭಗವಂತ ನನ್ನ ಪ್ರತಿಜ್ಞೆಯನ್ನು ಮುರಿದಿದ್ದೇಯ. ನಾಳೆಯ ಯುದ್ಧದಲ್ಲಿ ನಿನ್ನ ಪ್ರತಿಜ್ಞೆ 'ಅಸ್ತ್ರ ಕೈಯಲ್ಲಿ ಹಿಡಿಯುವುದಿಲ್ಲ' ಎಂಬುದನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದನು.

ಮಾರನೆ ದಿನದ ಯುದ್ಧವು ಭಯಂಕರವಾಗಿ ನಡೆಯುತ್ತಿದೆ. ಆ ಭಯಂಕರ ಯುದ್ಧ ಮುಗಿಯುವುದಿಲ್ಲವೆಂದು ಅರ್ಜುನನ ರಕ್ಷಣೆಗಾಗಿ ಭಕ್ತನ ಪ್ರತಿಜ್ಞೆ ನೆರವೇರಿಸುವುದಕ್ಕಾಗಿ ತನ್ನ ಪ್ರತಿಜ್ಞೆಯನ್ನು ಮುರಿದು ರಥದ ಗಾಲಿಯನ್ನು ತೆಗೆದುಕೊಂಡು ಕೃಷ್ಣನು ತನ್ನ ಪೀತಾಂಬರವು ಜರುಗಿ ಕೆಳಗೆ ಬಿದ್ದಿತಾದರೂ ಆ ಕಡೆ ಲಕ್ಷ್ಯವಿಲ್ಲದೆ ಭೀಷ್ಮನ ಕಡೆ ನುಗ್ಗಿದನು. ಆ ದೃಶ್ಯ ವಿಚಿತ್ರವಾಗಿತ್ತು. ಭೀಷ್ಮನು ಅಸ್ತ್ರ ಶಸ್ತ್ರ ಕೆಳಗೆ ಹಾಕಿ ಭಗವಂತನ ಆ ಬರುವಿಕೆಯ ಆ ಕ್ರೋಧದ ಭಾವವನ್ನು ನೋಡುತ್ತಾ ಆಶ್ಚರ್ಯಚಕಿತನಾಗಿ ಕೈ ಮುಗಿದು ನಿಂತೇ ಬಿಟ್ಟನು. ಆ ದೃಶ್ಯವನ್ನು ಹಿಂದೆ ಯಾರೂ ನೋಡಿರಲಿಕ್ಕಿಲ್ಲ – ಮುಂದೆಯೂ ಯಾರೂ ನೋಡಿರಲಾರರು. ಅಷ್ಟೊತ್ತಿಗೆ ಶಿಖಂಡಿ ಬಾಣ ಪ್ರಯೋಗ ಮಾಡಿದ. ಅರ್ಜುನನೂ ಹೊಡೆದ ಅವನ ಮೈಯಲ್ಲಿ ಬಾಣಗಳಮಯವಾಯಿತು, ಅದೇ ಶರಪಂಜರವಾಯಿತು.

ಇದು ಒಂದು ಯುದ್ಧ ತಂತ್ರ. ಇದರಿಂದ ಭೀಷ್ಮರು ತಾನೇ ಹೇಳಿಕೊಟ್ಟು ಮಾಡಿದ ಶತ್ರುಗಳಿಗೆ ಒಳಗುಟ್ಟನ್ನು ತಿಳಿಸಿ ಮಾಡಿದ ಸ್ವಪಕ್ಷದ್ರೋಹವೆನ್ನುತ್ತಾರೆ.

ದ್ರೋಣರು ಕೌರವ ಸೇನಾಪತಿಗಳಾದರು. ಭರದಿಂದ ಯುದ್ಧ ಸಾಗಿತು. ಆಚಾರ್ಯರಿಂದ ಚಕ್ರವ್ಯೂಹ ನಿರ್ಮಾಣವಾಯಿತು. ಅಭಿಮನ್ಯುವು ಅದರ ಒಳಹೊಕ್ಕು

---

**"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಹಾತ್ ಸತ್ಯ ಮ ಪ್ರಿಯಂ ಪ್ರಿಯಂಜ ನಾನೃತಂ ಬ್ರೂಯಾದ್ವೇಷ ಧರ್ಮೋವಿದೀಯತೇ"** – ಸತ್ಯವನ್ನೇ ಹೇಳಿರಿ, ಪ್ರಿಯವಾದುದನ್ನೇ ಹೇಳಿರಿ, ಸತ್ಯವಾಗಿದ್ದರೂ ಕೇಳಲು ಅಪ್ರಿಯವಾಗಿದ್ದರೆ ಅದನ್ನು ಹೇಳಬೇಡಿರಿ (ಶ್ರುತಿ)



ಅಪ್ರತಿಹತನಾಗಿ ಹೋರಾಡಿದನು. ಅವನಿಗೆ ಚಕ್ರವ್ಯೂಹದೊಳಕ್ಕೆ ಹೋಗುವುದು ಮಾತ್ರ ತಿಳಿದಿತ್ತು. ಹೊರಗೆ ಬರುವುದು ತಿಳಿದಿರಲಿಲ್ಲ. ಅವನನ್ನೆದರಿಸುವುದು ದ್ರೋಣರಿಗೆ ದುಸ್ತರವಾಯಿತು. ದ್ರೋಣರ ಆಜ್ಞೆಯಂತೆ ಕರ್ಣನು ಸುತ್ತಿಗಟ್ಟಿದ್ದ ವೀರಭಟರಲ್ಲಿ ಸುತ್ತಿಯೇ ಹೋರಾಡುತ್ತಿದ್ದ ಅಭಿಮನ್ಯುವಿನ ಹಿಂಬದಿಯಲ್ಲಿ ಸಾಧಿಸಿ ಅವನಿಗರಿವಾಗದಂತೆಯೇ ಅವನು ಬಿಲ್ಲು ಹಿಡಿದಿದ್ದ ಕೈಯನ್ನೇ ಕತ್ತರಿಸಿದನು. ಮೊಂಡು ಕೈಯಲ್ಲಿ ರಥದ ಗಾಲಿಯಿಂದ ಯುದ್ಧ ಮಾಡಿದ. ಕಾಲನ್ನೇ ಮೋಸದಿಂದ ಕತ್ತರಿಸಿದನು. ಆ ಮಹಾವೀರನು ಎಷ್ಟು ಹೊತ್ತು ಯುದ್ಧ ಮಾಡಿಯಾನು? ಅವನು ಒದ್ದಾಡುತ್ತಿರುವಾಗಲೇ ಅವನನ್ನು ತೀರಿಸಿದರು.

ಬ್ರಾಹ್ಮಣರಾಗಿ, ಬಿಲ್ಲೋಜರಾಗಿ, ಧರ್ಮಯುದ್ಧದ ಬಗೆಯನ್ನು ಚೆನ್ನಾಗಿ ಬಲ್ಲವರಾಗಿ ಶಿಷ್ಯರಿಗೆ ಧರ್ಮ ಯುದ್ಧವನ್ನು ಬೋಧಿಸುವವರು, ಮೇಲಾಗಿ ಈ ಕುರುಕ್ಷೇತ್ರ ಯುದ್ಧದ ಆರಂಭದಲ್ಲಿ "ಪ್ರತ್ಯಸ್ತ್ರವಿಲ್ಲದೆ ಯಾವ ಮಂತ್ರಾಸ್ತ್ರವೂ ಈ ಯುದ್ಧದಲ್ಲಿ ಉಪಯೋಗಿಸಲ್ಪಡತಕ್ಕದಲ್ಲ" ಎಂದು ಮಾರಕಾಸ್ತ್ರಗಳ ನಿಯಂತ್ರಣವನ್ನು ಘೋಷಿಸಿದವನು – ಆ ವೀರ ಅಭಿಮನ್ಯುವನ್ನು ಹೀಗೆ ಅಮಾನುಷವಾದ ರೀತಿಯಲ್ಲಿ ನಿರ್ದಯೆಯಿಂದ ಏಕೆ ಕೊಲ್ಲಿಸಿದರು. ಇಲ್ಲಿ ದ್ರೋಣರು ನ್ಯಾಯ ಧರ್ಮವನ್ನು ಅತಿಕ್ರಮಿಸಲಿಲ್ಲವೇ?

ಮತ್ತೆ ದ್ರೋಣವಧಾಪ್ರಕರಣ. ಐದನೇ ದಿನದ ಯುದ್ಧ ತೆರಳಿದ್ದ ಆಚಾರ್ಯರು ಪಾಂಡವರ ಒಟ್ಟು ಸೈನ್ಯದ ಮೇಲೆ "ಬ್ರಹ್ಮಾಸ್ತ್ರ" ಪ್ರಯೋಗ ಮಾಡಿದರು. ಎಲ್ಲರೂ ಕೈಯಲ್ಲಿರುವ ಅಸ್ತ್ರ ಕೆಳಗೆ ಹಾಕಿ ಈ ಮಹಾಸ್ತ್ರಕ್ಕೆ ಕೈ ಜೋಡಿಸಿದರು. ಆಗ ಅಸ್ತ್ರವು ನಿಷ್ಕ್ರಿಯವಾಯಿತು. ಅಷ್ಟು ಹೊತ್ತಿಗೆ ಧರ್ಮರಾಜನು "ಅಶ್ವತ್ಥಾಮ ಹತಃ ಕುಂಜರ" ಎಂದು ಕೂಗಿದನು. ಆ ಅಶ್ವತ್ಥಾಮ ಎಂಬುವ ಆನೆಯು ಸತ್ತಿತೆಂದು ಹೇಳಲು ಆ ಆನೆಗೆ ಆ ಮಹತ್ವ ಯಾವುದು? ಎಲ್ಲಾ ಆನೆ ಸತ್ತಾಗ ಸುಮ್ಮನಿದ್ದು ಆ ಅಶ್ವತ್ಥಾಮ ಆನೆ ಸತ್ತ ವಿಷಯವೇನು ಅಷ್ಟು ಗಹನವಾದುದು? ಅದಲ್ಲ ಮುಖ್ಯ ವಿಷಯ ದ್ರೋಣಾಚಾರ್ಯರನ್ನು ನಿಶ್ಯಸ್ತ್ರಗೊಳಿಸಬೇಕಾಗಿತ್ತು. ಅವರ ಕೈಯಲ್ಲಿ ಅಸ್ತ್ರವಿದ್ದರೆ ತ್ರಿಮೂರ್ತಿಗಳು ಬಂದರೂ ಅವರು ಅಳುಕುವವರಲ್ಲ. ಧರ್ಮರಾಜ ಅಂತಹ ಸತ್ಯವಂತನು ಆ ಆನೆ ವಿಷಯ ಹೇಳುವ ಅಗತ್ಯತೆ ಏನಿತ್ತು? ಕೃಷ್ಣನು 'ಕುಂಜರ' ಎನ್ನುವಾಗ ತನ್ನ ಪಾಂಚಜನ್ಯ ಊದಿದನು. ಬರೀ 'ಅಶ್ವತ್ಥಾಮ ಹತಃ' ಎನ್ನುವುದು ಕೇಳಿತು. ದ್ರೋಣರು ಚಿರಂಜೀವಿಯಾದ ಮಗ ಸತ್ತನೆಂದು ಹೇಗೆ ಭಾವಿಸಿದ. ಮಗನ ಚಿರಂಜೀವತ್ವದಲ್ಲಿ ಅವರಿಗೆ ಸಂಶಯವಿತ್ತೆ? ದೇಹ ಬಿಟ್ಟು ಮಗನನ್ನು ಹುಡುಕಲು ಮೂರು ಲೋಕಕ್ಕೂ ಹೋದರು ಅದೇ ಕಾಲವನ್ನು ಕಾಯುತ್ತಿದ್ದ ದೃಷ್ಟದ್ಯುಮ್ನನು ಅವರ ಶರೀರವನ್ನು ತುಂಡು ಮಡಿದ. ಅಭಿಮನ್ಯುವನ್ನು ಹಾಗೆ ಕೊಲ್ಲಿಸಿದ ದ್ರೋಣರಿಗೆ ಹೀಗೆ ಸಾವು ಬಂತು.

ದ್ರೋಣರ ನಂತರ ಕರ್ಣನೇ ಕೌರವ ಸೈನ್ಯದ ಸೈನ್ಯಾಧಿಕಾರಿ. ಮೊದಲನೆ ದಿವಸ

ಅವನಿಗೆ ಸೋಲು ಎರಡನೆ ದಿವಸ ಶಲ್ಯವನ್ನು ಸಾರಥಿಯಾಗಿ ಮಾಡಿದರು. ಅದೇ ದಿನ ಭೀಮಸೇನನು ದುಶ್ಯಾಸನನ್ನು ಕೆಡವಿ ಹಾಕಿ ಅವನ ಹೃದಯ ಸೀಳಿ ಅವನ ಚರ್ಮದ ಮೇಲೆ ದ್ರೌಪದಿಯನ್ನು ಕೂಡಿಸಿ ಆಕೆ 13 ವರ್ಷ ಬಾಚದ ತಲೆಯನ್ನು ಬಾಚಿದ. ಅದು ಅವಳ ಪ್ರತಿಜ್ಞೆ.

ನಂತರ ಕರ್ಣಾಜುನರ ಯುದ್ಧ, ಕರ್ಣನಲ್ಲಿದ್ದ ಕರ್ಣಕುಂಡಲ ಅಮೃತ ಕಲಶವನ್ನು ಇಂದ್ರನು ಭಿಕ್ಷೆ ಬೇಡಿದಾಗ ಕೊಟ್ಟಿದ್ದ ಕರ್ಣ, ಅದೂ ಇರಲಿ. ಇನ್ನು ಅರ್ಜುನನ್ನು ಕೊಲ್ಲುವುದಕ್ಕಾಗಿ ಇದ್ದ ಸರ್ಪಬಾಣ ಪ್ರಯೋಗಿಸಿದಾಗ ಅರ್ಜುನನ ರಥವನ್ನು ಭಗವಂತನು ಅದುಮಿದ್ದರಿಂದ ಕೆಳಗೆ ಹೋದ ರಥ ಕೊರಳಿಗೆ ಇಟ್ಟ ಗುರಿ ಕಿರೀಟ ಹಾರಿಸಿಕೊಂಡು ಹೋಯಿತು. ಆ ಸರ್ಪ ಬಾಣ ವಾಪಾಸು ಬಂದು "ಮತ್ತೊಂದು ಸಾರಿ ಬಿಡು" ಎಂದಿತು. ಕರ್ಣ ತನ್ನ ತಾಯಿಗೆ "ತೊಟ್ಟ ಬಾಣ ತೊಡಬಾರದು- ಇಟ್ಟ ಗುರಿ ತಪ್ಪಬಾರದೆಂಬ ಪ್ರತಿಜ್ಞೆಯನ್ನು" ಕೊಟ್ಟಿದ್ದನು. ಆದುದರಿಂದ ಸರ್ಪ ಬಾಣ ತೊಡುವಂತಿರಲಿಲ್ಲ. ಅದು ಕರ್ಣನನ್ನು ಶಪಿಸಿ ಬಭ್ರುವಾಹನನಲ್ಲಿ ಹೋಗಿ ಸೇರಿತು. ಕರ್ಣನ ಸಾರಥಿ ಶಲ್ಯನು ಇವನನ್ನು ತೊರೆದು ಹೋದನು. ಅಷ್ಟು ಹೊತ್ತಿಗೆ ರಥದ ಗಾಲಿ ಭೂಮಿಯಲ್ಲಿ ಹೂತು ಹೋಯಿತು. ಆಗ ಅರ್ಜುನ ಧರ್ಮಬಾಹಿರನಾಗಬೇಡ ನಾನು ರಥದಲ್ಲಿಲ್ಲ ನನ್ನ ಮೇಲೆ ಬಾಣ ಪ್ರಯೋಗ ಮಾಡಬೇಡವೆಂದನು. ಅರ್ಜುನನು ಸುಮ್ಮನಾದನು. ಜೊತೆಗೆ ಪರಶುರಾಮರ ಶಾಪದಿಂದ ದಿವ್ಯಾಸ್ತ್ರಗಳ ಪ್ರಯೋಗಗಳು ಕರ್ಣನಿಗೆ ಮರೆತೇ ಹೋಯಿತು. ಆಗ ಭಗವಂತನು ಕರ್ಣನು ಭಾಗಿಯಾಗಿದ್ದ ಧರ್ಮ ಬಾಹಿರವಾದ ಘಟನೆಗಳನ್ನೇ ಮುಂದಿಟ್ಟು ಅರ್ಜುನನನ್ನು ಪ್ರೋತ್ಸಾಹಿಸಿದನು. ಭೀಮನಿಗೆ ವಿಷ ಹಾಕುವಾಗ ಈ ಕರ್ಣನಿಗೆ ಧರ್ಮ ತಿಳಿದಿರಲಿಲ್ಲವೇ? ಈಗ ಮೃತ್ಯು ಸಮೀಪಿಸಿದಾಗ ಧರ್ಮವನ್ನು ಹೇಳುತ್ತಾನೆ ಕರ್ಣ, ದ್ರೌಪದಿ ದೇವಿ ಸೀರೆ ಎಳೆಯುವಾಗ ಎಲ್ಲಿ ಹೋಗಿತ್ತು ಇವನ ಧರ್ಮ? ಮೋಸದಿಂದ ಜೂಜಾಡುವಾಗ ಎಲ್ಲಿ ಹೋಗಿತ್ತು ಇವನ ಧರ್ಮ? ಮಗು ಅಭಿಮನ್ಯುವನ್ನು ಮೋಸದಿಂದ ಕೊಲ್ಲುವಾಗ ಇವನ ಧರ್ಮ ಎಲ್ಲಿ ಹೋಗಿತ್ತು. ಇವನು ಪಾಪಿ, ಆತನನ್ನು ಹೊಡೆ ಮೊದಲು ಎಂದು ಹೊಡೆಸಿ ಕರ್ಣನನ್ನು ತೆಗೆದರು.

ನಂತರ ಶಲ್ಯನಿಗೆ ಸೇನಾಪತಿ ಪಟ್ಟ, ಅವನು ಸ್ವಲ್ಪ ಹೋರಾಡಿ ಸತ್ತ. ಶಕುನಿಯೂ ಸತ್ತ. ಒಬ್ಬನೇ ದುರ್ಯೋದನ ಉಳಿದ. ದ್ವೈಪಾಯನ ಸರೋವರದಲ್ಲಿ ಅಡಗಿ ಕುಳಿತ. ಭೀಮನು ಬಂದು ಮೂದಲಿಸಿ ಅವನನ್ನು ಹೊರಕ್ಕೆ ಕರೆದು ಯುದ್ಧ ಮಾಡಿದ. ಸೂರ್ಯನು ಮುಳುಗುವ ಹೊತ್ತಿಗೆ ಸರಿಯಾಗಿ ಭೀಮನ ಗದೆಯ ಏಟು ದ್ರೌಪದಿಯ ಮೇಲೆ ತೊಡೆ ಚಪ್ಪರಿಸಿದ ಸ್ಥಳಕ್ಕೆ ಬಿದ್ದು ತೊಡೆ ಮುರಿದು ಬಿದ್ದ 11 ಅಕ್ಷೋಹಿಣಿ ಸೈನ್ಯವನ್ನು ಕೂಡಿ ಹಾಕಿದ್ದ ದುರ್ಯೋಧನನು ತೊಡೆ ಮುರಿದು ಬಿದ್ದಿದ್ದಾನೆ. ಮೈಯೆಲ್ಲಾ ಮಣ್ಣಾಗಿದೆ. ಚಕ್ರವರ್ತಿ ಮಾತಾಡಿಸುವವರಿಲ್ಲ.

ಅಂದು ರಾತ್ರಿ ಅಶ್ವತ್ಥಾಮನಿಂದ ಆ ಮಹಾಭಾರತ ಸಂಗ್ರಾಮದ ಉಪಸಂಹಾರ



ಕಾರ್ಯವು ವಿಲಕ್ಷಣವಾಗಿಯೇ ಜರುಗಿತು. ಕೌರವರ ಕಡೆ ಅಶ್ವತ್ಥಾಮ, ಕೃಪ, ಕೃತವರ್ಮ ಮಾತ್ರ ಉಳಿದಿದ್ದಾರೆ. ಈ ಮೂರು ಜನ ಬಿದ್ದ ಕೌರವನನ್ನು ನೋಡಲು ಹೋದರು. ಕಷ್ಟಪಟ್ಟು ಉಸಿರಾಡುತ್ತಿದ್ದ ದುರ್ಯೋಧನ ಅಶ್ವತ್ಥಾಮನಿಗೆ ಸೇನಾಧಿಪತಿ ಪಟ್ಟಕೊಟ್ಟ. ಅಶ್ವತ್ಥಾಮನು ಮಧ್ಯರಾತ್ರಿಯಲ್ಲಿ ಪಾಂಡವರ ಶಿಬಿರದತ್ತ ನಡೆದ ಕೃಪ-ಕೃತವರ್ಮರನ್ನು ಹೊರಗೆ ಹೊರಡುವವರನ್ನು ತಲೆ ಕಡಿಯಿರಿ ಎಂದು ಹೇಳಿ ಅಶ್ವತ್ಥಾಮನು ಒಬ್ಬನೇ ಪಾಂಡವರ ಪಾಳಯವನ್ನು ನುಗ್ಗಿದ. ಎಲ್ಲರೂ ನಿದ್ದೆಯಿಂದ ಮಲಗಿದ್ದರು. ವಿಜಯೋತ್ಸಾಹದಿಂದ ಅಶ್ವತ್ಥಾಮನು ಮಲಗಿ ನಿದ್ರಿಸುತ್ತಿರುವವರನ್ನು ನಿರ್ದಯವಾಗಿ ಕೊಂದು ಹಾಕಿದ, ಸುದೈವದಿಂದ ಹೆಂಗಸರನ್ನು ಮಾತ್ರ ಬಿಟ್ಟಿದ್ದ. ದ್ರೌಪದಿಯ ಮಕ್ಕಳ ತಲೆ ಕಡಿದು ದುರ್ಯೋಧನನಿಗೆ ತೋರಿಸಿದನೋ ಇವು ಹಸುಳೆಗಳು ಎಂದು ಕೌರವನು ಪ್ರಾಣ ಬಿಟ್ಟ. ಇಲ್ಲಿಗೆ ಯುದ್ಧ ಮುಗಿಯಿತು. ಮಾರನೆ ಬೆಳಿಗ್ಗೆ ಸೆರಸಿಕ್ಕ ಅಶ್ವತ್ಥಾಮನನ್ನು ಅರ್ಜುನ ಎಳೆತಂದ ದ್ರೌಪದಿಯು "ಗುರು ಪುತ್ರ ಇವನಲ್ಲಿ ದ್ರೋಣಾಚಾರ್ಯರೇ ಇದ್ದಾರೆ. ಇವನನ್ನು ಇವನ ತಲೆಯಲ್ಲಿರುವ ಮಣಿಯನ್ನು ಕತ್ತರಿಸಿಬಿಟ್ಟು ಬಿಡಿ" ಎಂದಳು – "ತನ್ನ ಮಕ್ಕಳು ಹೋದರೂ ಮತ್ತೆ ಬರಲ್ಲ. ಬ್ರಾಹ್ಮಣನನ್ನು ಸಂಹರಿಸಿಬೇಡಿರಿ" ಎಂದಳು. ಅವನನ್ನು ಕೈ ಬಿಟ್ಟರು. ಅವನು ಹುಚ್ಚನಾಗಿ ಎಲ್ಲಿಗೋ ಹೋದನು.

ಇಲ್ಲಿಗೆ ಭಾರತ ಯುದ್ಧ ಮುಗಿಯಿತು. ಪಾಂಡವರು ಗೆದ್ದರು, ಕೌರವರು ಸೋತರು. ಎರಡು ತಲೆಮಾರಿನಷ್ಟು ಜನ ಸತ್ತು ಹೋದರು. ಇದೆಲ್ಲಾ ದುರ್ಯೋಧನನ ಹಠ. ಅವನ ಅಹಂಕಾರ ಮರಣವನ್ನೇ ಕಾಣದ ಭೀಷ್ಮ ದ್ರೋಣಾದಿಗಳು ಸತ್ತು ಹೋದರು. ಭೂಭಾರವು ಅಂದರೆ ಅಧರ್ಮವು ಬೇರು ಸಹಿತ ನಿವೃತ್ತಿಯಾಯಿತು. ಧರ್ಮಪುತ್ರನ ಪುನರುತ್ಥಾನವಾಯಿತು. ಕೃಷ್ಣಾವತಾರದ ಪರಮಪ್ರಯೋಜನ ಗೀತಬೋಧ ಎರಡನೆಯದು ಅಧರ್ಮಾಚರಣೆಯು ನಿವೃತ್ತಿಯಾಯಿತು. ಧರ್ಮದ ಪುನರುತ್ಥಾನವಾಯಿತು. 'ಸತ್ಯವೇ ಜಯಿಸುತ್ತದೆ. ಧರ್ಮವಂತರಾದ ಪಾಂಡವರು ಸತ್ಯಕ್ಕಾಗಿ ವನವಾಸ-ಅಜ್ಞಾತವಾಸ ಅನುಭವಿಸಿದರು. ಅನೇಕ ಜನ ರಾಕ್ಷಸರನ್ನು ಕೊಂದರು. ಮಹಾಬಲಿಶಾಲಿಯಾದ ಕೀಚಕನ ಸಂತಾನಹರಣವಾಯಿತು.

ಹಾಗೆಯೆ ಮೂರ್ಖರಾದ ಯಾದವರು ಒಬ್ಬ ಋಷಿ ಶಾಪಕ್ಕೆ ಸಿಕ್ಕಿ – ಗಾಂಧಾರಿಯ ಶಾಪಕ್ಕೆ ಸಿಕ್ಕಿ ತಮಗೆ ತಾವೇ ಹೊಡೆದಾಡಿ ಸತ್ತು ಹೋದರು. ಇದು ಕೃಷ್ಣಾವತಾರ! ಕೃಷ್ಣಾವತಾರವು ಲೀಲಾವತಾರ. ಲೀಲಾಮಾನುಷ ಶ್ರೀಕೃಷ್ಣನು ಪ್ರಪಂಚದಲ್ಲಿ ತನ್ನ ಭೌತಿಕ ಶಕ್ತಿಯನ್ನು ಭಾರತದಲ್ಲಿಯೂ ತನ್ನ ದೈವಿಕ ಸಾಮರ್ಥ್ಯವನ್ನು ಭಾಗವತದ ಮೂಲಕವಾಗಿಯೂ ತನ್ನ ಆಧ್ಯಾತ್ಮ ಶಕ್ತಿಯನ್ನು ಭಗವದ್ಗೀತೆಯ ಮೂಲಕವಾಗಿಯೂ ತೋರಿಸಿದನು. ಶ್ರೀಕೃಷ್ಣ ಭಗವಂತನಿಗೆ ಅನಂತ ನಮಸ್ಕಾರಗಳು.

**ಓಂ ತತ್ಸತ್**

* * * *